# ಜನತಾವಾಣಿ

ಸಂಪಾದಕರು :
ಎಂ.ಎಸ್.ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 12, 2018

ಸಂಪುಟ : 45 ಸಂಚಿಕೆ : 149 ದೂರವಾಣಿ : 254736, 231016 ವಾಟ್ಸ್‌ಆ್ಯಪ್ : 91642 99999 ಪುಟ : 4 ರೂ : 4.00 www.janathavani.com Email: janathavani@mac.com




ದಾವಣಗೆರೆ ಜಿಲ್ಲಾಡಳಿತದ ವಿವಿಧ ಇಲಾಖೆಗಳು ಮತ್ತು ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿನ ತುಂಗಭದ್ರಾ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನಿರ್ಗಮಿತ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರನ್ನು ಸನ್ಮಾನಿಸುವುದರ ಮೂಲಕ ಬೀಳ್ಕೊಡಲಾಯಿತು.

# ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸಾಲ ಮನ್ನಾಕ್ಕೆ ಬಿಜೆಪಿ ಅಡ್ಡಗಾಲು: ಸಿಎಂ

ಬೆಂಗಳೂರು, ಅ.11- ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಮ್ಮ ರೈತರು ಪಡೆದಿರುವ ಕೃಷಿ ಸಾಲ ಮನ್ನಾ ಮಾಡಲು ಬಿಜೆಪಿ ನಾಯಕರು ಅಡ್ಡಿ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಗಂಭೀರ ಆರೋಪ ಮಾಡಿದ್ದಾರೆ.

ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಜೆಪಿ ನಾಯಕರು, ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡದಂತೆ ನೋಡಿಕೊಳ್ಳಲು ಕೇಂದ್ರದ ಮೇಲೆ ಒತ್ತಡ ಹೇರಿದ್ದಾರೆ ಎಂದು ಆರೋಪಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ ರಾಜ್ಯೋತ್ಸವ ದಿನದಂದು ನಮ್ಮ ರೈತರ ಸಾಲದ ಮೊದಲ ಕಂತಿನ ಭಾಗವಾಗಿ 6,500 ಕೋಟಿ ರೂ. ತೆಗೆದಿರಿಸಿದ್ದೇನೆ.

**ರಾಜ್ಯ ಬಿಜೆಪಿ ನಾಯಕರಿಗೆ ರೈತರ ಬಗ್ಗೆ ಕಳಕಳಿ ಇದ್ದರೆ, ತಕ್ಷಣವೇ ಪ್ರಧಾನಿ ನರೇಂದ್ರ ಮೋದಿ ಅವರನ್ನೋ ಅಥವಾ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರನ್ನೋ ಭೇಟಿ ಮಾಡಿ ಸಾಲ ಮನ್ನಾಕ್ಕೆ ಅನುಮತಿ ನೀಡುವಂತೆ ಒತ್ತಡ ತರಲಿ.**

**- ಹೆಚ್.ಡಿ. ಕುಮಾರಸ್ವಾಮಿ**

ಆದರೆ ಅದನ್ನು ತೆಗೆದುಕೊಳ್ಳಲು ರಾಷ್ಟ್ರೀಕೃತ ಬ್ಯಾಂಕ್‌ಗಳೇ ಮುಂದೆ ಬರುತ್ತಿಲ್ಲ.

ಈಗಾಗಲೇ ಸಹಕಾರಿ ಬ್ಯಾಂಕ್‌ಗಳಲ್ಲಿ 2 ಲಕ್ಷ ರೂ.ವರೆಗೂ ರೈತರು ಪಡೆದ ಕೃಷಿ ಸಾಲ ಮನ್ನಾ ಪ್ರಕ್ರಿಯೆ ಆರಂಭಗೊಂಡಿದೆ. ಇದೇ ಕಾಲಕ್ಕೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸಾಲ ತೀರಿಸಲು ನಾನು ಸಿದ್ಧನಿದ್ದೇನೆ, ಆದರೆ ಅವರು, ರೈತರು ಪಡೆದ ಸಾಲದ ಬಗ್ಗೆ ಮಾಹಿತಿಯನ್ನೇ ನೀಡುತ್ತಿಲ್ಲ.

ನಾನೂ ಸೇರಿದಂತೆ, ಅಧಿಕಾರಿಗಳ ಪ್ರತ್ಯೇಕ ತಂಡ ನಿರಂತರವಾಗಿ ಈ ಬ್ಯಾಂಕ್‌ಗಳ ಆಡಳಿತ ಮಂಡಳಿಯೊಂದಿಗೆ ಚರ್ಚೆ ನಡೆಸುತ್ತಿದ್ದೇವೆ.

ಆದರೆ ಆರ್‌ಬಿಐ ತಮಗೆ ಈ ಸಂಬಂಧ ಯಾವುದೇ ಮಾರ್ಗಸೂಚಿ ನೀಡುತ್ತಿಲ್ಲ ಎಂದು ಈ ಬ್ಯಾಂಕ್‌ಗಳು ದೆಹಲಿಯತ್ತ ಬೊಟ್ಟು ಮಾಡುತ್ತಿವೆ.

ಮೊದಲು ನಮ್ಮ ನಿಲುವಿಗೆ ಸ್ಪಂದಿಸಿದ್ದ ಬ್ಯಾಂಕ್ ಆಡಳಿತ ಮಂಡಳಿ, ಏಕಾಏಕಿ ದೂರ ಸರಿದಿದ್ದರ ಹಿಂದೆ ಬಿಜೆಪಿಯ ಕೈವಾಡ ಇದೆ ಎಂದರು.

ಕೇಂದ್ರ ಸರ್ಕಾರವಂತೂ ರೈತರ ಸಾಲ ಮನ್ನಾವನ್ನೂ ಮಾಡಿಲ್ಲ, ನಾವು ಕೇಳಿದ್ದಕ್ಕೆ (2ನೇ ಪುಟಕ್ಕೆ)

# ಆಲಯಗಳಂತೆ, ಮಸೀದಿಗಳಲ್ಲೂ ಮಹಿಳೆಯರಿಗೆ ಪ್ರವೇಶ ಕೊಡಿಸಿ

## ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಲು ಕೇರಳ ಮಹಿಳಾ ಸಂಘಟನೆಗಳ ನಿರ್ಧಾರ

ತಿರುವನಂತಪುರಂ, ಅ. 11 – ಶಬರಿಮಲೆ ದೇವಾಲಯದಲ್ಲಿ ಎಲ್ಲಾ ವಯೋಮಾನದ ಮಹಿಳೆಯರು ಪ್ರವೇಶಿಸಬಹುದು ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದ ಪ್ರೋತ್ಸಾಹಗೊಂಡಿರುವ ಕೇರಳದ ಮಹಿಳಾ ಹಕ್ಕುಗಳ ಗುಂಪೊಂದು, ದೇಶಾದ್ಯಂತ ಇರುವ ಎಲ್ಲಾ ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರವೇಶ ನೀಡಬೇಕೆಂದು ಸುಪ್ರೀಂ ಕೋರ್ಟ್ ಮೊರೆ ಹೋಗಲು ನಿರ್ಧರಿಸಿದೆ.

ಪ್ರಗತಿಪರ ಮಹಿಳಾ ವೇದಿಕೆಯಾದ ಎನ್.ಐ.ಎಸ್.ಎ. ಶೀಘ್ರದಲ್ಲೇ ಸುಪ್ರೀಂ ಕೋರ್ಟ್ ಮೊರೆ ಹೋಗಲಿದೆ. ಮಹಿಳೆಯರು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡುವುದಷ್ಟೇ ಅಲ್ಲದೇ 'ಇಮಾಮ್'ಗಳಾಗಿ ನೇಮಕಗೊಳ್ಳಲೂ ಸಹ ಅನುಮತಿ ನೀಡಬೇಕೆಂದು ಕೋರಿಕೊಳ್ಳಲಿದೆ.

ಇಸ್ಲಾಂನಲ್ಲಿ ಲಿಂಗ ಸಮಾನತೆಗಾಗಿ ಅಭಿಯಾನ ನಡೆಸುತ್ತಿರುವ ಈ ಸಂಘಟನೆ, ಬಹುಪತ್ನಿತ್ವ ಹಾಗೂ ನಿಕಾಹ್ ಹಲಾಲಾ ಮೇಲೆ (2ನೇ ಪುಟಕ್ಕೆ)

# ಮೈತ್ರಿ ಸರ್ಕಾರದ ಮೊದಲ ವಿಕೆಟ್ ಪತನ



**ಬಿಎಸ್‌ಪಿಯ ಏಕೈಕ ಸಚಿವ ಮಹೇಶ್ ರಾಜೀನಾಮೆ**

ಬೆಂಗಳೂರು, ಅ. 11 - ರಾಜ್ಯ ಸಂಪುಟದಲ್ಲಿರುವ ಬಿಎಸ್‌ಪಿಯ ಏಕೈಕ ಸಚಿವ ಎನ್. ಮಹೇಶ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಆದರೆ, ಆಡಳಿತಾರೂಢ ಮೈತ್ರಿ ಸರ್ಕಾರಕ್ಕೆ ಬೆಂಬಲ ನೀಡುವುದನ್ನು ಮುಂದುವರೆಸುವುದಾಗಿ ತಿಳಿಸಿದ್ದಾರೆ.

ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡಿರುವುದಾಗಿ ಅವರು ಹೇಳಿದ್ದಾರೆ.

ಕಾಂಗ್ರೆಸ್ ಜೊತೆ ರಾಜಸ್ಥಾನ ಹಾಗೂ ಮಧ್ಯ ಪ್ರದೇಶದಲ್ಲಿ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಅವರು ಪ್ರಕಟಿಸಿದ ಬೆನ್ನಲ್ಲೇ ಮಹೇಶ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮಹೇಶ್ ರಾಜೀನಾಮೆ ಸಲ್ಲಿಸಿದ್ದಾರೆ. ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊಳ್ಳೇಗಾಲದ ತಮ್ಮ ಕ್ಷೇತ್ರದ ಕಡೆಗೆ ಹಾಗೂ ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷ ಬಲಪಡಿಸುವ ಬಗ್ಗೆ ಗಮನ ಹರಿಸುವುದಾಗಿ ಹೇಳಿದ್ದಾರೆ. ನಾನು ಬೆಂಗಳೂರಿನಲ್ಲೇ ಉಳಿದುಕೊಂಡಿದ್ದೇನೆ, ಕೊಳ್ಳೇಗಾಲದ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಅಪಪ್ರಚಾರ ನಡೆಸಲಾಗುತ್ತಿದೆ. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷವನ್ನು ಬಲಪಡಿಸುವ ಅಗತ್ಯವೂ ಇದೆ ಎಂದೂ ಅವರು ತಿಳಿಸಿದ್ದಾರೆ.

ರಾಜೀನಾಮೆಯ ನಿರ್ಧಾರದ ಬಗ್ಗೆ ನಾನಿನ್ನೂ ಮಾಯಾವತಿ ಅವರಿಗೆ ತಿಳಿಸಿಲ್ಲ. ನಾನು ನೇರವಾಗಿ ಮಾಧ್ಯಮದ ಎದುರು ಬಂದಿದ್ದೇನೆ. ನಂತರ ಬೆಹೆನ್‌ಜಿ (ಮಾಯಾವತಿ) ಅವರಿಗೆ ತಿಳಿಸುತ್ತೇನೆ ಎಂದು ಮಹೇಶ್ ಹೇಳಿದ್ದಾರೆ.

ರಾ ಜೀ ನಾ ಮೆ ಯ ನ್ನು (2ನೇ ಪುಟಕ್ಕೆ)

# ಬಾಬಾ ರಾಮಪಾಲ್ 2 ಹತ್ಯೆಗಳಲ್ಲಿ ಭಾಗಿ : ನ್ಯಾಯಾಲಯದ ತೀರ್ಪು



ಹಿಸಾರ್ (ಹರಿಯಾಣ), ಅ. 11 – ಹರಿಯಾಣದ ಹಿಸಾರ್‌ನ ಸತ್‌ಲೋಕ್ ಆಶ್ರಮದ ಬಾಬಾ ರಾಮಪಾಲ್ ಹಾಗೂ 26 ಅನುಯಾಯಿಗಳು ಎರಡು ಹತ್ಯೆ ಹಾಗೂ ಇತರೆ ಅಪರಾಧಗಳಲ್ಲಿ ದೋಷಿಗಳು ಎಂದು ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ಹಿಸಾರ್ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಮೂರ್ತಿ ಡಿ.ಆರ್. ಛಲಿಯಾ ಅವರು ತೀರ್ಪು ನೀಡಿದ್ದು, ರಾಮಪಾಲ್ ಹಾಗೂ ಅನುಯಾಯಿಗಳು ಮಹಿಳೆಯರನ್ನು ಕಾನೂನು ಬಾಹಿರವಾಗಿ ಆಶ್ರಮದಲ್ಲಿ ಬಂಧಿಸಿಟ್ಟುಕೊಂಡಿದ್ದರು. ಹತ್ಯೆ ಹಾಗೂ ಇತರೆ ಅಪರಾಧಗಳಲ್ಲಿ ಭಾಗಿಯಾಗಿದ್ದರು ಎಂದು ಹೇಳಿದ್ದಾರೆ.

ಹಿಸಾರ್ ಜಿಲ್ಲಾ ಬಂಧೀಖಾನೆಯಲ್ಲಿರುವ ತಾತ್ಕಾಲಿಕ ನ್ಯಾಯಾಲಯದಲ್ಲಿ ನಾಲ್ಕು ಗಂಟೆ ಕಾಲ ವಿಚಾರಣೆ ನಡೆಸಿದ ನಂತರ ನ್ಯಾಯಮೂರ್ತಿ ತೀರ್ಪು ಪ್ರಕಟಿಸಿದ್ದಾರೆ. ರಾಮಪಾಲ್ ಹಾಗೂ ಅನುಯಾಯಿಗಳನ್ನು ನವೆಂಬರ್ 2014ರಲ್ಲಿ ಬಂಧಿಸಲಾಗಿತ್ತು. (2ನೇ ಪುಟಕ್ಕೆ)

# ಖರೀದಿ ಕೇಂದ್ರ ಸ್ಥಾಪಿಸದಿದ್ದರೆ ಗುಳೇ ಹೆಚ್ಚಾಗಲಿದೆ



ಹೊನ್ನಾಳಿ, ಅ. 11- ಜಿಲ್ಲೆಯೂ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಬೆಳೆಗಳು ನಷ್ಟವಾಗಿದ್ದು ಸರ್ಕಾರ ಕೂಡಲೇ ಬೆಂಬಲ ಬೆಲೆ, ಖರೀದಿ ಕೇಂದ್ರಗಳ ಸ್ಥಾಪನೆ ಹಾಗೂ ಕೆರೆ ತುಂಬಿಸುವ ಕೆಲಸ ಮಾಡದೇ ಹೋದಲ್ಲಿ ರೈತರು ಗುಳೇ ಹೋಗುವ ಪ್ರಮಾಣ ಹೆಚ್ಚಾಗಲಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಇಲ್ಲಿನ ಹಿರೇಕಲ್ಮಠದಲ್ಲಿ ಹಮ್ಮಿಕೊಂಡಿರುವ ಶರನ್ನವರಾತ್ರಿ ಮತ್ತು ದಸರಾ ಮಹೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ 23 ಧಾನ್ಯಗಳು ಹಾಗೂ ಎಣ್ಣೆ ಕಾಳುಗಳಿಗೆ ಬೆಂಬಲ ಬೆಲೆ ಘೋಷಿಸಿದ್ದು ರಾಜ್ಯ ಸರ್ಕಾರ ಕೂಡ ಬೆಂಬಲ ಬೆಲೆ ಘೋಷಣೆ ಹಾಗೂ ಮೆಕ್ಕೆಜೋಳ, ಭತ್ತ ಮುಂತಾದ ಬೆಳೆಗಳ ಖರೀದಿ ಕೇಂದ್ರಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಪಡಿಸಲಾಗುವುದೆಂದರು.

ಅಧ್ಯಕ್ಷತೆ ವಹಿಸಿದ್ದ ರಾಂಪುರ ಮಠದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿ, ವಿಶ್ವದಲ್ಲಿ ಅನ್ಯ ಧರ್ಮಿಯವರಿಗೆ ಜೀವಿಸಲು ಅನೇಕ ದೇಶಗಳಿವೆ ಆದರೆ ಹಿಂದುಗಳಿಗೆ ಇರುವುದು ಹಿಂದುಸ್ಥಾನ ಮಾತ್ರ ಪ್ರ ತಿ ಯೊ ಬ್ಬ (2ನೇ ಪುಟಕ್ಕೆ)

**ಮಂಡಕ್ಕಿ ಮೆಣಸಿನ್ಕಾಯಿ**

ಎಸ್.ಎಸ್. ಆನಂದ್










# ಗ್ರಾಮೀಣ ಕೃಪಾಂಕ ಸೌಲಭ್ಯದೊಂದಿಗೆ ಸೇರ್ಪಡೆಯಾದ ನೌಕರರಿಗೆ ಸಾಮಾಜಿಕ ನ್ಯಾಯ ಒದಗಿಸುವಂತೆ ಮನವಿ



ಹರಪನಹಳ್ಳಿ, ಅ.11- ಗ್ರಾಮೀಣ ಕೃಪಾಂಕ ಸೌಲಭ್ಯದೊಂದಿಗೆ ರಾಜ್ಯ ಸರ್ಕಾರಿ ನೌಕರರಾಗಿ ಸೇವೆಗೆ ಸೇರ್ಪಡೆಯಾಗಿರುವ ನೌಕರರಿಗೆ ಸಾಮಾಜಿಕ ನ್ಯಾಯ ಒದಗಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಗ್ರಾಮೀಣ ಕೃಪಾಂಕ ನೌಕರರ ತಾಲ್ಲೂಕು ವೇದಿಕೆ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಮಾತನಾಡಿ, 1998 ರಿಂದ 2003ರವರೆಗೆ ರಾಜ್ಯ ಸರ್ಕಾರಿ ಸೇವೆಗೆ ಸೇರ್ಪಡೆಯಾಗಿರುವ 5017 ನೌಕರರಿಗೆ ಸೇವೆಯನ್ನು ಸಂರಕ್ಷಿಸುವ ಮತ್ತು ಮರು ನೇಮಕಾತಿ ಮಾಡುವಾಗ ಅವರ ಜಾಗದಲ್ಲಿ ನಗರ ಪ್ರದೇಶದ ಅಭ್ಯರ್ಥಿಗಳು ಬರದೇ ಇದ್ದ ಪಕ್ಷದಲ್ಲಿ ಗ್ರಾಮೀಣ ಅಭ್ಯರ್ಥಿಗಳನ್ನೇ ಮುಂದುವರೆಸುವ ಬದಲು ವಜಾಗೊಂಡಂತಹ ಎಲ್ಲಾ ನೌಕರರನ್ನು ವಿಶೇಷ ನೇಮಕಾತಿ ನಿಯಮದ ಮೂಲಕ ನೇಮಕಾತಿ ಮಾಡಲಾಯಿತು. ನೇಮಕಾತಿ ವೇಳೆ 1998 ರಿಂದ 2003ರ ನಡುವಿನ ಸೇವೆಯನ್ನು ಪರಿಗಣಿಸದೇ 2003 ರಿಂದ ಹೊಸ ನೇಮಕಾತಿ ಎಂಬುದಾಗಿ ಪರಿಗಣಿಸಿರುವುದು ದುರ್ದೈವವಾಗಿದೆ. ಈ ಅವಧಿಯಲ್ಲಿ ನೇಮಕವಾದ ನೌಕರರಿಗೆ ಐದು ವರ್ಷದ ಸೇವೆ ಇಲ್ಲದಂತಾಗಿದೆ. ಸೇವೆ ಸಲ್ಲಿಸಿದ ಸೇವೆಯನ್ನು ಕೇವಲ ರಜೆ ಮತ್ತು ಪಿಂಚಣಿಗೆ ಪರಿಗಣಿಸಲಾಗಿದೆ. ಹಿಂದಿನ ಸೇವೆಯನ್ನು ಪರಿಗಣಿಸಿ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಮುಂದುವರೆಸಲು ಕ್ರಮ ಜರುಗಿಸಬೇಕು ಎಂದರು.

ಶಿಕ್ಷಕ ಕೆ. ಮೂಗಪ್ಪ ಮಾತನಾಡಿ, 1990 ರಲ್ಲಿ ಶಿಕ್ಷಕರಾಗಿ ಆಯ್ಕೆಯಾದ ನಮಗೆ ಸ್ವಲ್ಪ ಸಮಯದಲ್ಲಿ ವಜಾಗೊಳಿಸಿದ ನಂತರ ಸರ್ಕಾರ ಪುನಃ ಆಯ್ಕೆ ಸ್ಥಳಕ್ಕೆ ನಿಯೋಜಿಸಲಾಯಿತು. ವೇತನ ಸಂರಕ್ಷಣೆ ಮತ್ತು ಸೇವಾ ಜೇಷ್ಠತೆ ನೀಡಬೇಕು ಮತ್ತು ಬಡ್ತಿ ನೀಡಬೇಕು ಎಂದು ಒತ್ತಾಯಿಸಿದರು.

ಶಿಕ್ಷಕ ಬಿ. ಮೃತ್ಯುಂಜಯ ಮಾತನಾಡಿ, 1999ರಲ್ಲಿ ನೇಮಕವಾಗಿ 2003ರಲ್ಲಿ ಗ್ರಾಮೀಣ ಕೃಪಾಂಕದಲ್ಲಿ ವಜಾಗೊಂಡು ಮರು ನೇಮಕವಾದ ನಮಗೆ 5 ವರ್ಷಗಳ ಸೇವೆಯನ್ನು ಪರಿಗಣಿಸಿ, ಸೌಲಭ್ಯಗಳನ್ನು ನೀಡಬೇಕು ಎಂದರು.

ಶಿಕ್ಷಕ ಬಿ. ರಾಜಶೇಖರ್, ಕೆ. ಮಾನಪ್ಪ, ಜಿ. ಸಿದ್ದಪ್ಪ, ಸೋಮಶೇಖರ, ಕೆ.ಮೋಹನ, ಹೇಮ್ಲಾನಾಯ್ಕ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸಾಲ ಮನ್ನಾಕ್ಕೆ ಬಿಜೆಪಿ ಅಡ್ಡಗಾಲು

(1ನೇ ಪುಟದಿಂದ) ಆರ್ಥಿಕ ಸಹಾಯವನ್ನೂ ಕೊಟ್ಟಿಲ್ಲ, ನಮ್ಮ ಸಂಪನ್ಮೂಲದಲ್ಲೇ ಸಂಕಷ್ಟ ದಲ್ಲಿರುವ ರೈತರ ಕೈಹಿಡಿಯಲು ಮುಂದಾದರೂ, ಬಿಜೆಪಿ ನಾಯಕರು ಅವಕಾಶ ಮಾಡಿಕೊಡುತ್ತಿಲ್ಲ ಎಂದು ದೂರಿದರು.

ರೈತರ ವಿಷಯದಲ್ಲಿ ರಾಜಕೀಯ ಮಾಡುವುದನ್ನು ಬಿಡಿ, ನಿಮಗೆ ಅವರ ಬಗ್ಗೆ ಕಿಂಚಿತ್ತಾದರೂ ಕಳಕಳಿ ಇದ್ದರೆ, ನಿಮ್ಮ ಸರ್ಕಾರದ ಮೇಲೆ ಒತ್ತಡ ತಂದು ಅವರ ನೆರವಿಗೆ ಬನ್ನಿ ಎಂದರು.

ರಾಷ್ಟ್ರೀಕೃತ ಬ್ಯಾಂಕ್‌ಗಳು ಮಾಹಿತಿ ನೀಡಿದರೆ ರೈತರನ್ನು ಉಳಿಸಿಕೊಳ್ಳುತ್ತೇನೆ, ನಾನು ಹಣ ಕಟ್ಟುತ್ತೇನೆ ಎಂದರೂ ಬೇಡ ಎನ್ನುವ ಈ ಸಂಸ್ಥೆಗಳು, ಒಂದೇ ಕಂತಿನಲ್ಲಿ ತಾವು ಪಡೆದ ಸಾಲ ತೀರಿಸಿದಲ್ಲಿ ಸಾಲದ ಮೇಲಿನ ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡುವುದಾಗಿ ಜಾಹೀರಾತು ನೀಡುತ್ತಿವೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ಇಂತಹ ಜಾಹೀರಾತನ್ನೇ ರೈತರಿಗೆ ನೋಟಿಸ್ ನೀಡಲಾಗುತ್ತಿದೆ ಎಂದು ಬಿಜೆಪಿ ನಾಯಕರು ಡಂಗೂರ ಹೊಡೆದರು. ಇದು ನೋಟಿಸ್ ಅಲ್ಲ, ಮಾಹಿತಿ, ಇದರಲ್ಲೇ ರಾಜಕೀಯ ಮಾಡಲು ಹೊರಟಿರುವ ಅವರಿಗೆ ಕೇಂದ್ರದ ಮೇಲೆ ಒತ್ತಡ ತಂದು ಮಾರ್ಗಸೂಚಿ ಕೊಡಿಸಲು ಸಾಧ್ಯವಿಲ್ಲವೇ? ಎಂದು ಪ್ರಶ್ನಿಸಿದರು.

## 2 ಹತ್ಯೆಗಳಲ್ಲಿ ಭಾಗಿ : ಕೋರ್ಟ್ ತೀರ್ಪು

(1ನೇ ಪುಟದಿಂದ) ಎರಡೂ ಪ್ರಕರಣಗಳಲ್ಲಿ ದೋಷ ಸಾಬೀತಾಗಿದೆ ಎಂದು ಹೇಳಿರುವ ನ್ಯಾಯಮೂರ್ತಿ, ಅಕ್ಟೋಬರ್ 16-17ರಂದು ಎರಡೂ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ಹೇಳಿದ್ದಾರೆ. ನವೆಂಬರ್ 19, 2014ರಂದು ಬರ್ವಾಲಾ ಪೊಲೀಸ್ ಠಾಣೆಯಲ್ಲಿ ರಾಮಪಾಲ್ ವಿರುದ್ಧ ಮೊದಲನೆ ಹಾಗೂ ಉತ್ತರ ಪ್ರದೇಶದ ಲಲಿತ್‌ಪುರ ಜಿಲ್ಲೆಯ ಜಖೋರಾದಲ್ಲಿ 2ನೇ ದೂರು ದಾಖಲಿಸಲಾಗಿತ್ತು.

ಶಿವಪಾಲ್ ಹಾಗೂ ಸುರೇಶ್ ಎಂಬುವವರು ದೂರು ದಾಖಲಿಸಿ, ತಮ್ಮ ಪತ್ನಿಯರನ್ನು ಬರ್ವಾಲಾ ಹಳ್ಳಿಯಲ್ಲಿರುವ ರಾಮಪಾಲ್ ಆಶ್ರಮದಲ್ಲಿ ಬಂಧನದಲ್ಲಿಟ್ಟುಕೊಂಡು ಹತ್ಯೆಗೈಯ್ಯಲಾಗಿದೆ ಎಂದು ದೂರಿದ್ದರು. ಆಶ್ರಮದಲ್ಲಿ ಅಡಗಿದ್ದ ರಾಮಪಾಲ್ ಬಂಧಿಸಲು ಪೊಲೀಸರು ತೆರಳಿದಾಗ ಸುಮಾರು 15 ಸಾವಿರ ಅನುಯಾಯಿಗಳು ವಿರೋಧ ವ್ಯಕ್ತಪಡಿಸಿದ್ದರು. ಆಗ ಉಂಟಾಗಿದ್ದ ಹಿಂಸಾಚಾರದಲ್ಲಿ ಐವರು ಮಹಿಳೆಯರು ಹಾಗೂ ಒಂದು ಮಗು ಸಾವನ್ನಪ್ಪಿತ್ತು. ತೀರ್ಪು ನೀಡುವಾಗ ಹಿಂಸಾಚಾರ ಉಂಟಾಗದಂತೆ ಕಟ್ಟೆಚ್ಚರ ವಹಿಸಲಾಗಿತ್ತು. 4,000 ಪೊಲೀಸರು ಹಾಗೂ ಕ್ಷಿಪ್ರ ಕಾರ್ಯಾಚರಣೆ ಪಡೆ ಮತ್ತು ಅರೆಸೇನಾ ತುಕಡಿಗಳನ್ನು ಜಿಲ್ಲೆಯ ಹಲವೆಡೆ ನಿಯೋಜಿಸಲಾಗಿತ್ತು.

## ಕೇಂದ್ರ ಸ್ಥಾಪಿಸದಿದ್ದರೆ ಗುಳೇ ಹೆಚ್ಚಾಗಲಿದೆ



(1ನೇ ಪುಟದಿಂದ) ಹಿಂದೂಗಳು ತಮ್ಮ ಧರ್ಮ, ಸಂಸ್ಕೃತಿಗಳ ರಕ್ಷಣೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ಗಾಯಕ ಕಡದಕಟ್ಟೆ ತಿಮ್ಮಪ್ಪ ಅವರ ಸಾಹಿತ್ಯ, ಸಂಗೀತವಿರುವ 'ಹಿರೇಕಲ್ಮಠದ ವೈಭವ' ಧ್ವನಿ ಸುರುಳಿಯನ್ನು ಶಾಸಕ ಎಂ.ಪಿ. ರೇಣುಕಾಚಾರ್ಯ ಬಿಡುಗಡೆಗೊಳಿಸಿ ಮಾತನಾಡಿ, ತಾಲೂಕಿನಲ್ಲಿರುವ 3 ಜನ ಸ್ವಾಮೀಜಿಗಳ ಅಪೇಕ್ಷೆಯಂತೆ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಕಾರ್ಯವನ್ನು ಸರ್ಕಾರದ ಹಂತದಲ್ಲಿ ಪ್ರಯತ್ನಿಸಿ ಮಾಡಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ನೇತೃತ್ವವನ್ನು ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ. ಎಚ್. ಜಯಪ್ಪ ಉಪನ್ಯಾಸ ನೀಡಿದರು. ಕೆ. ಜಿ. ವೀರಭದ್ರಪ್ಪ, ಎಚ್.ಎಂ.ಗಂಗಾಧರಯ್ಯ, ಎಚ್.ಎ. ಉಮಾಪತಿ ಹಾಗೂ ಎಚ್.ಬಿ. ಶಿವಯೋಗಿ ಅವರಿಗೆ ಗುರುರಕ್ಷೆ ನೀಡಿ ಸನ್ಮಾನಿಸಲಾಯಿತು.

ವಹಿಸಿದ್ದರು, ನಿ. ಶಿಕ್ಷಕ ಜಿ.ಎಂ. ಹಿರೇಮಠ ದೇವಿ ಪುರಾಣ ವಾಚಿಸಿದರು. ಚನ್ನಯ್ಯ ಬೆನ್ನೂರು ಮಠ ಪ್ರಾಸ್ತಾವಿಕವಾಗಿ ಮಾತನಾಡಿದರೆ. ವಿಜಯಾನಂದ ನಿರೂಪಿಸಿದರು.

## ನಗರದಲ್ಲಿಂದು ವಿದ್ಯುತ್ ಇಲ್ಲ

ಹೆಗಡೆ ನರ್ಸಿಂಗ್ ಹೋಂ, ವಾಸನ್ ಐ ಕೇರ್‌ಆಸ್ಪತ್ರೆ, ವಿಶ್ವೇಶ್ವರಯ್ಯ ಪಾರ್ಕ್, ಮೋತಿ ವೀರಪ್ಪ ಕಾಲೇಜು, ಎಂ.ಸಿ.ಸಿ. 'ಎ' ಬ್ಲಾಕ್, ಪಿ.ಜೆ. ಬಡಾವಣೆ, 8ನೇ, 9ನೇ ಮೇನ್‌ರಸ್ತೆ, ವಿನೋಬನಗರ 1ನೇ ಮೇನ್, ಮುದ್ದಳ್ಳಿ ಕಾಂಪೌಂಡ್, ಸನ್‌ಶೈನ್ ಆಸ್ಪತ್ರೆ ಏರಿಯ, ಚರ್ಚ್‌ರಸ್ತೆ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿಂದು ತಪಾಸಣಾ ಶಿಬಿರ

ಅಟ್ರಿಮೆಡ್ ಫಾರ್ಮಾಸ್ಯೂಟಿಕಲ್‌ನಿಂದ ಸಂಜೆ 4 ಕ್ಕೆ ಅಶ್ವಿನಿ ಕ್ಲಿನಿಕ್‌ನಲ್ಲಿ ಎಲ್ಲಾ ತರಹದ ನೋವುಗಳಿಗೆ ಸಂಬಂಧಿಸಿದ ಕಾಯಿಲೆಗಳ ಉಚಿತ ತಪಾಸಣೆ ನಡೆಯಲಿದೆ. ಸಂಪರ್ಕಿಸಿ: 08192-235237.

## ಸರ್ಕಾರದ ಮೊದಲ ವಿಕೆಟ್ ಪತನ

(1ನೇ ಪುಟದಿಂದ) ಪರಿಗಣಿಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ ಎಂದವರು ಹೇಳಿದ್ದಾರೆ. ಸರ್ಕಾರದಲ್ಲಿ ಯಾರ ಬಗ್ಗೆಯೂ ನನಗೆ ಬೇಸರವಿಲ್ಲ. ಸಚಿವನಾಗಿ ನಾನು ಸಾಧ್ಯವಾದಷ್ಟು ಉತ್ತಮ ಕೆಲಸ ಮಾಡಿದ್ದೇನೆ ಮತ್ತು ರಾಜ್ಯ ಪ್ರವಾಸ ಮಾಡಿದ್ದೇನೆ ಎಂದವರು ಹೇಳಿದ್ದಾರೆ.

ಜೆಡಿಎಸ್ ಮತ್ತು ಬಿಎಸ್‌ಪಿ ಮಧ್ಯೆ ಚುನಾವಣಾ ಪೂರ್ವ ಮೈತ್ರಿಯಾಗಿತ್ತು. ಕುಮಾರಸ್ವಾಮಿ ನನಗೆ ದೊಡ್ಡ ಖಾತೆಯನ್ನೇ ಕೊಟ್ಟಿದ್ದರು. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಚಾಮರಾಜನಗರ ಮಹೇಶ್ ಹೇಳಿದ್ದಾರೆ.

**ಮಹಾಮೈತ್ರಿಗೆ ಹಿನ್ನಡೆ:** ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಹೇಶ್ ರಾಜೀನಾಮೆಯಿಂದ ಮೈತ್ರಿ ಸರ್ಕಾರದ ಮೊದಲ ವಿಕೆಟ್ ಪತನವಾದಂತಾಗಿದೆ. ಇದು ಮೈತ್ರಿ ಸರ್ಕಾರಕ್ಕೆ ಆಘಾತವೂ ಆಗಿದೆ.

ರಾಷ್ಟ್ರಮಟ್ಟದಲ್ಲಿ ಬಿಜೆಪಿ ವಿರುದ್ಧ ಮಹಾಮೈತ್ರಿ ಮಾಡಿಕೊಳ್ಳುವ ಕನಸಿಗೂ ಹಿನ್ನಡೆಯಾಗಿದೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನೊಂದಿಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದ ಬಿಎಸ್ಪಿಯಿಂದ ಏಕೈಕ ಶಾಸಕರಾಗಿ ಕೊಳ್ಳೇಗಾಲ ಮೀಸಲು ಕ್ಷೇತ್ರದಿಂದ ಎನ್. ಮಹೇಶ್ ಆಯ್ಕೆಯಾಗಿದ್ದರು. ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಬಿಎಸ್ಪಿ ಪ್ರತಿನಿಧಿಯಾಗಿ ಜೆಡಿಎಸ್ ಕೋಟಾದಲ್ಲಿ ಸಚಿವರಾಗಿದ್ದರು.

ಮಂತ್ರಿ ಪದವಿಯಲ್ಲಿ ನಾಲ್ಕು ತಿಂಗಳು ಪೂರ್ಣಗೊಳಿಸುವ ಮುನ್ನವೇ ಮಹೇಶ್ ರಾಜೀನಾಮೆ ನೀಡಿರುವುದು ಮೈತ್ರಿ ಸರ್ಕಾರದಲ್ಲಿನ ಗೊಂದಲವನ್ನು ಇನ್ನಷ್ಟು ಜಗಜ್ಜಾಹೀರು ಮಾಡಿದೆ.

## ಮಹಿಳೆಯರಿಗೆ ಪ್ರವೇಶ ಕೊಡಿಸಿ

(1ನೇ ಪುಟದಿಂದ) ಕಡಿವಾಣ ಹಾಕಬೇಕೆಂದೂ ಬಯಸಿದೆ.

ಮಹಿಳೆಯರು ಮಸೀದಿಗಳನ್ನು ಪ್ರವೇಶಿಸಬಾರದು ಹಾಗೂ ಪ್ರಾರ್ಥಿಸಬಾರದು ಎಂದು ಪವಿತ್ರ ಕುರಾನ್‌ನಲ್ಲಿ ಎಲ್ಲೂ ತಿಳಿಸಿಲ್ಲ ಎಂದು ಎನ್.ಐ.ಎಸ್.ಎ. ಅಧ್ಯಕ್ಷೆ ವಿ.ಪಿ. ಜುಹ್ರಾ ಹೇಳಿದ್ದಾರೆ.

ಎಲ್ಲಾ ವಯೋಮಾನದ ಮಹಿಳೆಯರು ಅಯ್ಯಪ್ಪಸ್ವಾಮಿ ದೇವಾಲಯ ಪ್ರವೇಶಿಸಬಹುದು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಐತಿಹಾಸಿಕ ಎಂದವರು ಬಣ್ಣಿಸಿದ್ದಾರೆ.

ಪುರುಷರಂತೆ ಮಹಿಳೆಯರೂ ಸಹ ಸಂವಿಧಾನಾತ್ಮಕವಾಗಿ ತಮ್ಮ ನಂಬಿಕೆಗೆ ಅನುಸಾರ ಪ್ರಾರ್ಥಿಸುವ ಹಕ್ಕು ಹೊಂದಿದ್ದಾರೆ. ಹೀಗಾಗಿ ಶಬರಿಮಲೆ ರೀತಿಯಲ್ಲೇ ಎಲ್ಲಾ ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರವೇಶಕ್ಕೆ ಹಕ್ಕು ನೀಡಬೇಕು ಎಂದವರು ಪ್ರತಿಪಾದಿಸಿದ್ದಾರೆ.

ಈ ಬಗ್ಗೆ ವಕೀಲರ ಜೊತೆ ಚರ್ಚೆ ನಡೆಸಲಾಗುತ್ತಿದೆ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಶೀಘ್ರ ಅರ್ಜಿ ಸಲ್ಲಿಸಲಾಗುವುದು ಎಂದವರು ಹೇಳಿದ್ದಾರೆ. ಪ್ರಸಕ್ತ ಮಹಿಳೆಯರು ಜಮಾತ್ – ಎ – ಇಸ್ಲಾಮ್ ಹಾಗೂ ಮುಜಾಹಿದ್ ಸಮುದಾಯದ ಮಸೀದಿಗಳಲ್ಲಿ ಪ್ರಾರ್ಥನೆ ಮಾಡಲು ಅವಕಾಶವಿದೆ. ಆದರೆ, ಸುನ್ನಿ ಪಂಗಡದ ಮಸೀದಿಗಳಲ್ಲಿ ಪ್ರಾರ್ಥಿಸಲು ಅವಕಾಶವಿಲ್ಲ. ಒಂದು ವೇಳೆ ಪ್ರವೇಶ ನೀಡಿದರೂ, ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಜಾಗಗಳನ್ನು ಕಲ್ಪಿಸಲಾಗಿದೆ ಎಂದವರು ಹೇಳಿದ್ದಾರೆ.

ಈ ಲಿಂಗಭೇದವನ್ನು ನಿವಾರಿಸಬೇಕು ಮತ್ತು ಮಹಿಳೆಯರು ಎಲ್ಲಾ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಝುಹ್ರಾ ಹೇಳಿದ್ದಾರೆ. ತ್ರಿವಳಿ ತಲಾಕ್ ವಿಷಯಕ್ಕೆ ಸಂಬಂಧಿಸಿದಂತೆ ಮೊದಲು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದವರಲ್ಲಿ ಜುಹ್ರಾ ಸಹ ಒಬ್ಬರಾಗಿದ್ದಾರೆ.

## ಮುದಹದಡಿಯಲ್ಲಿ ಎನ್ನೆಸ್ಸೆಸ್ ಶಿಬಿರ

ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಇವರುಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ ಶಿಬಿರ ಮುದಹದಡಿಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿದ್ದು, ಇಂದು ಬೆಳಿಗ್ಗೆ 10 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಉಚಿತ ಜಾನುವಾರುಗಳ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಡಾ. ತಿಪ್ಪೇಸ್ವಾಮಿ ಎಸ್ ಅವರು ಜಾನುವಾರುಗಳ ತಪಾಸಣೆ ನಡೆಸುವರು.

ಸಂಜೆ 6 ಗಂಟೆಗೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಟಿ.ಬಿ. ಹನುಮನಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಗೀತಾ ಕೆ.ಬಿ, ಹೆಚ್. ಶಶಿಕಲಾ, ಅಂಜಿನಮ್ಮ ನಿಂಗಪ್ಪ ಅವರುಗಳು ಆಗಮಿಸುವರು. ಬಾರಿಕರ ಕರಿಯಪ್ಪ ಮತ್ತು ಎನ್. ಓಹಿಲೇಶ್ವರ ಅವರುಗಳು ಉಪನ್ಯಾಸ ನೀಡುವರು.


**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕರ್ನಾಟಕ ಗೃಹ ಮಂಡಳಿ ಮತ್ತು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ನಮ್ಮ ವ್ಯವಹಾರ ಕಮೀಷನ್ ಆಧಾರದ ಮೇಲೆ)

**ಮನೆ ಮಾರಾಟಕ್ಕಿದೆ**
ಅಶೋಕ ಟಾಕೀಸ್ ಹತ್ತಿರ LIC ಆಫೀಸ್ ಎದುರುಗಡೆ, 20x25 East ಡ್ಯೂಪ್ಲೆಕ್ಸ್, ಮೂರು ಬೆಡ್ ರೂಂ ಮನೆ. 45 Lakh ಕ್ಕೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಮನೆ ಲೀಸ್‌ಗೆ ಇದೆ**
ದಾವಣಗೆರೆಯ ಕುಂದುವಾಡ ರೋಡ್ ಜೈನ್ ಲೇ ಔಟ್‌ನಲ್ಲಿ ಡಬಲ್ ಬೆಡ್ ರೂಂ ಪೂರ್ವ ದಿಕ್ಕಿನ ಮುನ್ಸಿಪಲ್ ನೀರು ಮತ್ತು ಬೋರ್‌ವೆಲ್ ನೀರಿನ ಸೌಲಭ್ಯವಿರುವ ಸುಸಜ್ಜಿತ ಮನೆ ಲೀಸ್‌ಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
97392 04631, 89042 88094

**ಅಪಾರ್ಟ್‌ಮೆಂಟ್ ಮಾರಾಟಕ್ಕೆ**
2 BHK, 3 BHK,
S.S. 'A', P.J. Extn., ಅಥಣಿ ಕಾಲೇಜು ಹತ್ತಿರ, M.C.C. 'B'.
ಬೂಸ್ನೂರ್ ಕಿರಣ್, ಏಜೆಂಟ್
98440-63409, 97315-63409

**ವೈದ್ಯರಾಗಲು ಸುವರ್ಣಾವಕಾಶ**
ನೀವು ನೀಟ್ ಪರೀಕ್ಷೆ ಬರೆದಿದ್ದೀರೇ? ಕಡಿಮೆ ಅಂಕ ಗಳಿಸಿದ್ದೀರಾ? ಚಿಂತೆ ಬೇಡ. ನಿಮಗೆ ವೈದ್ಯರಾಗುವ ಕನಸು ನನಸಾಗಲಿದೆ. ಪ್ರತಿಷ್ಠಿತ ಕರ್ನಾಟಕದ ಕಾಲೇಜಿನಲ್ಲಿ ನಿಮ್ಮ ಸೀಟ್‌ಗಾಗಿ:
98805 35333, 99167 14610

**ಮನೆ ಬಾಡಿಗೆಗೆ / ಲೀಜ್‌ಗೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ (ಆನಂದ ಭವನ ಹಿಂಭಾಗ) ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಇದೆ.
98444 04790

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಬೇಕಾಗಿದ್ದಾರೆ**
ಶ್ರೀ ಶಿವಾನಂದ ಸ್ಟೋರ್ಸ್, ಹೋಲ್ ಸೇಲ್ & ರಿಟೇಲ್ ಪಟಾಕಿ ವ್ಯಾಪಾರಿಗಳು, ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡಲು SSLC ಪಾಸ್/ಫೇಲ್ ಆದ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಶ್ರೀ ಶಿವಾನಂದ ಸ್ಟೋರ್ಸ್,
731/3, ಮಂಡಿಪೇಟೆ, ದಾವಣಗೆರೆ.

**ಎಸ್ಸೆಸ್ಸೆಲ್ಸಿ ಟಿ.ಸಿ. ಕಳೆದಿದೆ**
ಎಸ್.ಎಂ. ಪ್ರಭುದೇವ ಬಿನ್ ಮಾನಪ್ಪ ಎಂಬ ಹೆಸರಿನ 1989-90ನೇ ಸಾಲಿನ ಎಸ್ಸೆಸ್ಸೆಲ್ಸಿ, ವರ್ಗಾವಣೆ ಪತ್ರದ ಮೂಲ ಪ್ರತಿ ದಿನಾಂಕ : 12.09.2018 ರಂದು ವಿನೋಬನಗರ 3ನೇ ಮೇನ್, 9ನೇ ಕ್ರಾಸ್‌ನಲ್ಲಿ ಮನೆ ಸ್ಥಳಾಂತರ ಮಾಡುವಾಗ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿ.
94820 48015

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಸಿದ್ದನೂರು ಮತ್ತು ಅಗಸನಕಟ್ಟೆ ಮಾರ್ಗದ ನಡುವೆ 4 ಎಕರೆ ಜಮೀನು (ಸರ್ವೆ ನಂ. 64/2) ಮಾರಾಟಕ್ಕಿದೆ. ಸಂಪರ್ಕಿಸಿ :
ಮೊ. 99642 41490

**ಮನೆ ಬಾಡಿಗೆಗೆ ಇದೆ**
#1928/74, ಚೈತ್ರ ನಿವಾಸ ಎಂ.ಬಿ.ಎ. ಕಾಲೇಜ್ ಮೇನ್ ರೋಡ್, ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಮೊದಲನೇ ಮಹಡಿ, ಸಿಂಗಲ್ ಬೆಡ್ ರೂಂ.
94484 39667

**ಸೈಟುಗಳು ಮಾರಾಟಕ್ಕಿವೆ**
ಆವರಗೆರೆಯ ಪಿ. ಬಸವನಗೌಡ ಬಡಾವಣೆ ಪಕ್ಕದಲ್ಲಿ ಫೈನಲ್ ಅಪ್ರೂವಲ್ ಆಗಿರುವ 20x30 ಅಳತೆಯ ನಿವೇಶನಗಳು ಮಾರಾಟಕ್ಕಿವೆ. ಸಂಪರ್ಕಿಸಿ :
76196-40055

**ಲೆಕ್ಚರರ್ ಬೇಕಾಗಿದ್ದಾರೆ**
Mechanical, Electronics & Communications, E&E. Salary 9000/-.
ಸಮೃದ್ಧಿ ಕೋಚಿಂಗ್ ಅಕಾಡೆಮಿ
ಮೊ: 95917 26616, 81472 62361

**ಕೆಲಸಕ್ಕೆ ಬೇಕಾಗಿದ್ದಾರೆ**
ಗಿಫ್ಟ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಮತ್ತು ಲೇಡಿಸ್ ಸ್ಟಾಫ್ ಬೇಕಾಗಿರುತ್ತಾರೆ.
RUCHI COLLECTIONS
Mandipet, Davangere.
99645 26424

**ತಿಂಡಿ KG ಲೆಕ್ಕದಲ್ಲಿ ದೊರೆಯುತ್ತದೆ**
ನಮ್ಮಲ್ಲಿ ಎಲ್ಲಾ ರೀತಿಯ ರೈಸ್ ಐಟಂಗಳು, ಉಪ್ಪಿಟ್ಟು, ಕೇಸರಿಬಾತ್, ಅವಲಕ್ಕಿ, ಪಲ್ಯ ಮುಂತಾದ ತಿಂಡಿಗಳು ಪಾರ್ಸಲ್ KG ಲೆಕ್ಕದಲ್ಲಿ ದೊರೆಯುತ್ತದೆ. (MIN 1/2 KG) ಸಾಂಬಾರ್, ಲೀಟರ್ ಲೆಕ್ಕದಲ್ಲಿ ದೊರೆಯುತ್ತದೆ. ಸಂಪರ್ಕಿಸಿ :
ಹೋಟೆಲ್ ಶ್ರೀ ದುರ್ಗಾಸಾಗರ್
ದಾವಣಗೆರೆ ಬ್ಲಡ್ ಬ್ಯಾಂಕ್ ಹತ್ತಿರ,
87489 89311

**2 BHK ಮನೆ ಲೀಸ್‌ಗೆ ಇದೆ**
#1339/1, C ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಮನೆ ಲೀಸ್‌ಗೆ ಇದೆ.
ಮೊ : 9902250506

**DASARA VACATION**
Free Spoken English
Classes Daily 12.00 PM to 1.30 PM.
From 12th to 29th October (15 Days)
GLOBAL EDUCATION ACADEMY
Opp. AVK College, Davangere.
Ph: 97405 88188

**ಬೇಕಾಗಿದೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್ / 'ಬಿ' ಬ್ಲಾಕ್ ಅಥವಾ ರಿಂಗ್ ರೋಡ್ ಹತ್ತಿರ 10,000 Sq. Feet ಖಾಲಿ ಜಾಗ ಬಾಡಿಗೆಗೆ ಬೇಕಾಗಿದೆ. ತಕ್ಷಣವೇ ಸಂಪರ್ಕಿಸಿ:
ಮೊ.: 78298 42466

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಹದಡಿ ಮುಖ್ಯ ರಸ್ತೆಯಲ್ಲಿ 2 ಸಾವಿರ ಚದುರಡಿಯುಳ್ಳ 4 ವಾಣಿಜ್ಯ ಮಹಡಿ ಮಳಿಗೆಗಳು ಬಾಡಿಗೆಗೆ ಇವೆ. ಶಾಪಿಂಗ್ ಕಾಂಪ್ಲೆಕ್ಸ್, ಬ್ಯಾಂಕ್, ಆಫೀಸ್‌ಗಳಿಗೆ ಯೋಗ್ಯವಾಗಿದೆ. ಸಂಪರ್ಕಿಸಿ :
94811-60777

**STAFF REQUIRED FOR PLYWOOD SHOWROOM**
Account ( Ladies) - 2
Marketing (Gents)- 2
Salesmen (Gents)- 2
Receiptionist (Ladies)- 1
Interested Contact :
9886511185

**ಸೈಟು ಮಾರಾಟಕ್ಕಿದೆ**
ಕೊಂಡಜ್ಜಿ ರೋಡ್ ಅಶೋಕ ನಗರದಲ್ಲಿ 30x50 ಪೂರ್ವ ಸೈಟು ಮಾರಾಟಕ್ಕಿದೆ.
99024-61583

**ಹೊಸ ಮನೆ ಲೀಸ್‌ಗೆ ಇದೆ**
ಶಾಮನೂರಿನಲ್ಲಿ 15x45 ರಲ್ಲಿ ಸಿಂಗಲ್ ಬೆಡ್ ರೂಂನ ಮನೆ ಲೀಸ್‌ಗೆ ಇದೆ.
85534 43155, 86182 69894

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ದೋಸೆ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ:
82773 06280

**Crash Course for Diploma & BE Students**
M1 & M2 all branch.
Contact: 97424 05558
Udayonmuka Institute of Coaching

**ಬೇಕಾಗಿದ್ದಾರೆ**
ತಂತಿ ಬೇಲಿ ಕಂಬ, ರಿಂಗ್, ಪಾರ್ಕ್ ಚೇರ್ ಹಾಗೂ ಇತರೆ ಕಾಂಕ್ರೀಟ್ ಕೆಲಸ ಮಾಡುವವರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
91085 59008

**ಸಂಘ-ಸಂಸ್ಥೆಗಳ, NGO, ಟ್ರಸ್ಟ್, ಫೈನಾನ್ಸ್, GST ಗಳ ನೋಂದಣಿ,**
ನವೀಕರಣ ಆಡಿಟ್‌ಗಾಗಿ ಸರ್ಕಾರ ಸೌಲಭ್ಯ ಪಡೆಯಲು.
ನಿರಂಜನ್ & ಕೋ
94838 62779

**ಪಿಗ್ಮಿ ಸಂಗ್ರಹಕಾರರು ಬೇಕಾಗಿದ್ದಾರೆ**
Davanagere Chayagrahakara Sahakara Sangha
90197 33999, 98442 81700

**ಮನೆ ಮಾರಾಟಕ್ಕಿದೆ**
ಚೌಕಿಪೇಟೆ ಗುಜರಿ ಲೈನ್ ರೋಡ್, #667/3, ದಾವಣಗೆರೆಯಲ್ಲಿ 16x28=448 ಅಡಿಯುಳ್ಳ ಮನೆ ಮಾರಾಟಕ್ಕಿದೆ.
ಮೊ. : 9480727964
98444 44701

**ಯಶ್ ಕ್ಲೀನಿಂಗ್ ಸೆಂಟರ್**
ನಿಮ್ಮ ಮನೆಗಳಲ್ಲಿರುವ ನೀರಿನ ತೊಟ್ಟಿ (Samp) ಹಾಗೂ ಸಿಂಟೆಕ್ಸ್ (Sintex) ಗಳನ್ನು ತೊಳೆದುಕೊಡಲಾಗುವುದು.
ಸಂಪರ್ಕಿಸಿ:
7795048997, 8548915576

**ಫೈನಲ್ ಅಪ್ರೂವಲ್ ಮತ್ತು ಡೋರ್ ನಂಬರ್ ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ನಗರದ ಸುತ್ತಮುತ್ತಲಿನಲ್ಲಿ 30x40, 30x50, 30x60, ಇತರೆ ಅಳತೆಯುಳ್ಳ ಫೈನಲ್ ಅಪ್ರೂವಲ್ ಮತ್ತು ಡೋರ್ ನಂಬರ್ ಸೈಟುಗಳು ಮಾರಾಟಕ್ಕಿವೆ.
ಮೊ: 97432-09680, 73537 09820

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 15ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಹುಬ್ಬಳ್ಳಿ, ವಿಜಯಪುರ, ಕಲಬುರುಗಿ ಹಾಗೂ ಬೆಂಗಳೂರಿನಲ್ಲಿ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481-59303, 97427-34488

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಆಫೀಸ್‌ನಲ್ಲಿ ಅನುಭವ ಇರುವ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ತಕ್ಷಣ ಬೇಕಾಗಿದ್ದಾರೆ. ಉತ್ತಮ ವೇತನ ಜೊತೆಗೆ ಇಎಸ್‌ಐ, ಪಿಎಫ್ ಸೌಲಭ್ಯವಿರುತ್ತದೆ.
HIGH ALERT SECURITY SERVICES
99641 18979, 83100 61181

**ಸಂಪರ್ಕಿಸಿ**
ಪಾರ್ಟ್ ಟೈಮ್/ಫುಲ್ ಟೈಮ್ ಕೆಲಸ
* ನಿರುದ್ಯೋಗಿ ಯುವಕ/ಯುವತಿಯರಿಗೆ
* ವಿದ್ಯಾರ್ಥಿಗಳಿಗೆ
* ಗೃಹಿಣಿಯರಿಗೆ
* ಹಿರಿಯ ನಾಗರಿಕರಿಗೆ
ಮೊ. : 9148366427

**ಸಿಮೆಂಟ್ ಇಟ್ಟಿಗೆಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಸಿಮೆಂಟ್ ಇಟ್ಟಿಗೆಗಳು ದೊರೆಯುತ್ತವೆ.
ಸಂಪರ್ಕಿಸಿ : ಆರ್.ವಿ. ಕಾಂಕ್ರೀಟ್ ಪ್ರಾಡಕ್ಟ್ಸ್
ಪಿ.ಬಿ. ರಸ್ತೆ, ಕರ್ಜಗಿ ಯುನಿಟ್ (ಎದುರು), ರಾಣೇಬೆನ್ನೂರು.
94484 66425, 99457 01230

**FOR SALE**
Franchise of Popular Brand Pre-School is for Sale with all Furniture and Teaching aids with toys.
For further Details :
Contact :
99809 94652

**S.R. SCHOOL OF BANKING**
BANK CLERKS PO' 5
CLERK NOTIFICATION OUT
NEW BATCH STARTS FROM 12.10.2018 ADMISSION IN PROGRESS CONTACT :
9902468924, 9964446661

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬೆಳಿಗ್ಗೆ 9 ರಿಂದ ಸಂಜೆವರೆಗೆ ವಾಚ್‌ಮನ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

**ಆಚಾರ್ ಅಂಡ್ ಕೋ**
ಸಂಘ-ಸಂಸ್ಥೆಗಳ ಸಲಹೆಗಾರರು
ಸರ್ಕಾರದ ಸೌಲಭ್ಯ ಪಡೆಯಲು ವಿದ್ಯಾಸಂಸ್ಥೆ, ಟ್ರಸ್ಟ್, NGO, ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘ, ಯುವಕ ಸಂಘ, ದೇವಸ್ಥಾನಗಳ ರಿಜಿಸ್ಟ್ರೇಷನ್, ನವೀಕರಣ, ಆಡಿಟ್‌ಗಾಗಿ
ಡಾ. ಸಿ.ಎಂ.ಮಲ್ಲಿಕಾರ್ಜುನಾಚಾರ್
98440 11532, 08192-233550

**ವಾರದ ಚೀಟಿ ಪ್ರಾರಂಭ**
ರೂ. 1ಲಕ್ಷದ ಚೀಟಿ ವಾರದ ಕಂತು 1300/- ರಿಂದ 2000/- ದವರೆಗೆ. 50 ಸದಸ್ಯರು & 50 ವಾರಗಳು ಸಂಪರ್ಕಿಸಿ:
ಸ್ಕಂದ ಚಿಟ್ ಫಂಡ್ಸ್ (ರಿ.)
84531 61869


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



॥ ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥
ದಾವಣಗೆರೆ ಸಿಟಿ ವಾಸಿ ಶ್ರೀ ಜೇರಟಗಿ ಎಸ್.ಎಂ. ರೇವಣಸಿದ್ದಯ್ಯ ಶಾಸ್ತ್ರೀ
(ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಅರ್ಚಕರು ವಿನೋಬನಗರ ದಾವಣಗೆರೆ)
ಇವರು ಮಾಡುವ ವಿಜ್ಞಾಪನೆಗಳು.
ದಿ: 04.10.2018 ಬುಧವಾರ ರಾತ್ರಿ 1.30ಕ್ಕೆ ನನ್ನ ಧರ್ಮಪತ್ನಿಯವರಾದ
**ಶ್ರೀಮತಿ ಎಸ್.ಎಂ. ಶಾಂತಮ್ಮ (ಬಾಬಿ)**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 12.10.2018 ನೇ ಶುಕ್ರವಾರ ಬೆಳಿಗ್ಗೆ 12.30ಕ್ಕೆ ದಾವಣಗೆರೆ ಸಿಟಿ ವಿನೋಬನಗರ 1ನೇ ಮೇನ್, 1ನೇ ಕ್ರಾಸ್ ಹತ್ತಿರವಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕ್ರಪ್ಪ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಮಕ್ಕಳು-ಸೊಸೆಯಂದಿರು : ಶ್ರೀಮತಿ ಸಿಂಧು ಶ್ರೀ ಪಂಚಾಯಕ್ಷರಯ್ಯ ಎಸ್.ಎಂ., ಶ್ರೀಮತಿ ವೀಣಾ ಶ್ರೀ ಆರ್. ಕುಮಾರಸ್ವಾಮಿ, ಮೊಮ್ಮಕ್ಕಳು : ಎಸ್.ಎಂ. ಚನ್ನಯ್ಯಸ್ವಾಮಿ, ಎಸ್.ಎಂ. ಪುಟ್ಟರಾಜು ಎಸ್.ಎಂ. ಮಲ್ಲಿಕಾರ್ಜುನ್ ಹಾಗೂ ಸಿದ್ದೇಶ್ವರ ಮಠ, ಕರಿಸಿದ್ದೇವರ ಮಠ ಬಂಧು-ಮಿತ್ರರು. ಮೇಘಾ ವಿಡಿಯೋ, ದಾವಣಗೆರೆ.
ವಿ.ಸೂ.: ಈಗಾಗಲೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಲಾಗಿದೆ.


**ಸೈಟು ಮಾರಾಟಕ್ಕಿದೆ**
# 395/17 A, ಆನೆಕೊಂಡ ವಿಭಾಗ ದಾವಣಗೆರೆಯಲ್ಲಿ 15x36 ಅಳತೆಯ ಸೈಟು ಮಾರಾಟಕ್ಕಿದೆ.
9880495103

**ಮನೆ ಮಾರಾಟಕ್ಕಿದೆ**
ಶಾಂತಿ ಟಾಕೀಸ್ ಹತ್ತಿರ ಐನಳ್ಳಿ ಕಾಂಪೌಂಡ್ ಒಳಗಡೆ 20x30 North ಮೂರು Floor ಮನೆ 42 Lakh ಕ್ಕೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಹೆಸರು ಬದಲಾವಣೆ**
ದಾವಣಗೆರೆ ಬೇತೂರು ರಸ್ತೆ (ಡೋರ್ ನಂ.831) ವಾಸಿ ಅಬ್ದುಲ್ ಖಾದರ್ ಇವರ ಪತ್ನಿ ಶಮಾ ಹಸ್ಮಿ ಅಜೀಜ್ ಎಂಬ ನಾನು ನನ್ನ ಹೆಸರನ್ನು ದಾವಣಗೆರೆ ನೋಟರಿವರ ಸಮ್ಮುಖದಲ್ಲಿ 'ಶಮಾ' ಎಂದು ಬದಲಾಯಿಸಿಕೊಂಡಿದ್ದೇನೆ. ಮುಂದಿನ ನನ್ನ ಎಲ್ಲಾ ವ್ಯವಹಾರಗಳು 'ಶಮಾ' ಎಂಬ ಹೆಸರಿನಲ್ಲಿಯೇ ನಡೆಯುತ್ತವೆ ಎಂದು ಪ್ರಮಾಣೀಕರಿಸಿದ್ದೇನೆ. - ಶಮಾ

ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ
**ಸ್ವರ ಚಿಟ್ ಫಂಡ್ಸ್ ಪ್ರೈ. ಲಿ.**
ರೂ. 3 ಲಕ್ಷದ ಚೀಟಿಗಳು, ದಿನದ ಕಂತು 375/- ರಿಂದ 500/-ರವರೆಗೆ 20 ಸದಸ್ಯರು, 20 ತಿಂಗಳು ಸಂಪರ್ಕಿಸಿರಿ.
73381 50123

**ಡ್ರೈವರ್ ಬೇಕಾಗಿದ್ದಾರೆ**
ಕಂಪನಿಯ ಟ್ರ್ಯಾಕ್ಸ್/ಕಾರ್ ಓಡಿಸಲು ಬ್ಯಾಡ್ಜ್ ಹೊಂದಿರುವವರು ಬೇಕಾಗಿದ್ದಾರೆ. ಕನಿಷ್ಠ ವೇತನ 8000/- ಕೆ.ಬಿ.ಆರ್. ಇಂಡಸ್ಟ್ರೀಸ್, ಆರ್.ಎಂ.ಸಿ. ಲಿಂಕ್ ರೋಡ್ ಮಹಾವೀರ ಭವನದ ಹತ್ತಿರ, ದಾವಣಗೆರೆ.
ಫೋ. : 08192 276124, 63621 47549

**SITE FOR SALE**
ನಗರದ S.P. Office (ಪೊಲೀಸ್) ಎದುರುಗಡೆ (New Flyover Bridge) ಹತ್ತಿರ, Final Approval, ಡೋರ್ ನಂ. ಸೈಟುಗಳು ಮಾರಾಟಕ್ಕಿವೆ. 60x40 (North) ಹಾಗೂ 30x40 (North) ನೇರವಾಗಿ ಸಂಪರ್ಕಿಸಿ :
8553572303, 9845322717

**ದಸರಾ ರಜಾ ದಿನಗಳ ತರಬೇತಿ**
Basic Knowledge
Hand writing
Drawing
Spoken English
ಸಿಂಚನ ಕೋಚಿಂಗ್ ಸೆಂಟರ್, ದಾವಣಗೆರೆ.
ಮೊ : 8553278258

**ಬೇಕಾಗಿದ್ದಾರೆ**
ಹೊಲಿಗೆ ಕೆಲಸಕ್ಕೆ ಮಹಿಳೆಯರು ಫೀಲ್ಡ್ ವರ್ಕ್ ಲೇಡೀಸ್ ಹಾಗೂ ಹೆಲ್ಪರ್ ಹುದ್ದೆಗೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ. 93808 33743

**ಉಚಿತ ಚಿಕಿತ್ಸಾ ಶಿಬಿರ**
ಮಧ್ಯ ವಯಸ್ಕ; ವೃದ್ಧಾಪ್ಯರಲ್ಲಿ ಕಾಣುವ ಪ್ರಮುಖ ರೋಗಗಳಲ್ಲಿ ಒಂದಾದ ಗಂಟುನೋವಿಗೆ ಆಯುರ್ವೇದ ವೈದ್ಯರಿಂದ ಸರಳ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ಉಚಿತವಾಗಿ ತಪಾಸಣೆ ನಡೆಸಿ ಚಿಕಿತ್ಸೆಯನ್ನು ನಮ್ಮ ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ.
ದಿನಾಂಕ : 12.10.2018
ಸ್ಥಳ : ಅಶ್ವಿನಿ ಆಯುರ್ವೇದಿಕ್ & ಜನರಲ್ ಸ್ಟೋರ್ಸ್
08192-235237
99162 60630

**VCP ಕ್ಯಾಸೆಟ್**
ನಿಮ್ಮಲ್ಲಿರುವ ಹಳೆಯ ಮದುವೆಯ VCP ಕ್ಯಾಸೆಟ್‌ಗಳನ್ನು DVD ಗೆ ಕನ್‌ವರ್ಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ:
90363 65227

**ಮದ್ಯಪಾನ ಬಿಡಬೇಕೆ?**
ಉಬ್ಬಸ ರೋಗ, ಕಾಲು ನೋವು, ಶರೀರ ದಪ್ಪವಾಗುವುದಕ್ಕೆ ಮತ್ತು ಸಣ್ಣದಾಗುವುದಕ್ಕೆ ಹಾಗೂ ಮಧುಮೇಹಕ್ಕೆ ನಮ್ಮಲ್ಲಿ ಆಯುರ್ವೇದಿಕ್ ಔಷಧಿ ದೊರೆಯುವುದು. ಪ್ರತಿ ತಿಂಗಳು 12,13 ರಂದು
ಸ್ಥಳ : ಶ್ರೀ ಲಾಡ್ಜ್, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ.
ಡಾ. ಶರ್ಮಾ 98869-40831

**ಯುವಕರು ಬೇಕಾಗಿದ್ದಾರೆ**
ಸ್ಪಂದನ ಸ್ಪೂರ್ತಿ ಫೈನಾನ್ಸಿಯಲ್ ಲಿಮಿಟೆಡ್
ಹುದ್ದೆ : ಕ್ರೆಡಿಟ್ ಅಸಿಸ್ಟೆಂಟ್:
ವಯೋಮಿತಿ : 20-27
ವಿದ್ಯಾರ್ಹತೆ :
SSLC + ITI, PUC
Any Degree
ಸಂದರ್ಶನ ನಡೆಯುವ ಸ್ಥಳ ಮತ್ತು ದಿನಾಂಕ
15.10.2018 ದಾವಣಗೆರೆ, ಚಿತ್ರದುರ್ಗ
Any Working Days
ವೇತನ ಶ್ರೇಣಿ :
8,500/- Training Period
After Training
up to 28,000
ಮಲ್ಲಿಕಾರ್ಜುನ ಬಿ.ಎಂ.: 9964840996
ವೇಣು ಆರ್.ಎಂ. : 9686085131
ಚಂದ್ರಹಾಸ್ ಆರ್.ಎಂ.: 9902370770
ಚೇತನ ಹೆಚ್.ಆರ್. : 7204875130
ಸಂತೋಷ್ ಡಿ.ಎಂ.: 7676362561

**HOME TUITION**
For 8th, 9th, 10th (Science & Maths), B.Sc., B.Ed., M.Sc. ಮಾಡಿರುವ ಉಪನ್ಯಾಸಕರಿಂದ ನಿಮ್ಮ ಮನೆಗೇ ಬಂದು ಪಾಠ ಮಾಡಲಾಗುವುದು.
Call: 89513 97381, 88929 82490, 88928 34031

**ತಕ್ಷಣ ಬೇಕಾಗಿದ್ದಾರೆ**
ಸೇಲ್ಸ್‌ಮನ್ಸ್ & ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ.
ರಾಜ್‌ಹಂಸ್ ಕಲೆಕ್ಷನ್ಸ್
ಚಾಮರಾಜಪೇಟೆ, ದಾವಣಗೆರೆ.
M: 94486 68077

**ARECA TEA**
For Diabetic Patients Available
Contact :
90603 01210

**ವಾಣಿಜ್ಯ ಹಾಲ್ ಬಾಡಿಗೆಗಿದೆ**
ಸವನೂರ್ ಬಾಬು ಆರ್ಕೇಡ್ ಲಾಯರ್ ರೋಡ್ ಪಿ.ಬಿ. ರೋಡ್ ಹತ್ತಿರ
ಫೋ. : 99002 60330

# ಗಾಂಧೀಜಿ ಸ್ತಬ್ಧಚಿತ್ರಕ್ಕೆ ಸ್ವಾಗತ



## ಹರಿಹರ

ಹರಿಹರ, ಅ.11- ಗಾಂಧೀಯವರ ಜೀವನ ಸಾಧನೆಯ ವಿವಿಧ ಘಟ್ಟಗಳನ್ನು ಗುರುತಿಸುವ ವಿನೂತನ ಗಾಂಧೀಜಿ ಸ್ಥಬ್ದ ಚಿತ್ರ ವಾಹನವು ನಿನ್ನೆ ದಾವಣಗೆರೆಯಿಂದ ಹರಿಹರ ನಗರಕ್ಕೆ ಆಗಮಿಸಿದಾಗ, ನಗರಸಭೆ ಅಧ್ಯಕ್ಷೆ ಸುಜಾತ ಬಿ. ರೇವಣಸಿದ್ದಪ್ಪ ಅವರು ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸ್ವಾಗತಿಸಿದರು.

ಈ ವೇಳೆ ಮಾತನಾಡಿದ ಅವರು, ಮಹಾತ್ಮಾ ಗಾಂಧೀಜಿಯವರು ಶಾಂತಿ, ಸತ್ಯ ಮತ್ತು ಅಹಿಂಸೆಗಳ ಮೂಲಕ ಹೋರಾಟಗಳನ್ನು ಮಾಡಿ ನಮಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. ವರ್ಣ ಬೇಧ ನೀತಿಯನ್ನು ಸ್ವತಹ ಆಫ್ರಿಕಾದಲ್ಲಿ ಅನುಭವಿಸಿ ನಮ್ಮ ದೇಶದ ಜನತೆಯಲ್ಲಿ ಅಸ್ಪೃಶ್ಯತೆ ಹೋಗಲಾಡಿ ಸುವಲ್ಲಿ ಶ್ರಮಿಸಿದ್ದಾರೆ. ಆದ್ದರಿಂದ ಅವರಲ್ಲಿದ್ದ ಶಾಂತಿ ಮತ್ತು ಸಹನೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ಹೇಳುತ್ತಾ ಸಾಗಬೇಕಾಗಿದೆ ಎಂದು ಹೇಳಿದರು. ನಗರಸಭೆ ಸದಸ್ಯ ಶಂಕರ್ ಖಟಾವಕರ್ ಮಾತನಾಡಿ, ರಾಜಕಾ ರಣಿಗಳು ಕೂಡ ಗಾಂಧೀಜಿಯವರ ಕನಸು ನನಸು ಮಾಡಲು ಆದ್ಯತೆ ನೀಡಬೇಕಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ ಮಾತನಾಡಿ, ಶಾಂತಿ ಮಾರ್ಗ ವಾಹನವು ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆ ಮುಖಾಂತರ ಹೊರಟು ಇದೇ ದಿನಾಂಕ 26ರಂದು ಬೀದರ್‌ನಲ್ಲಿ ಕೊನೆಗೊಳ್ಳಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ರೆಹಾನ್ ಪಾಷಾ, ವೆಂಕಟಮ್ಮ, ಬಿ ರೇವಣಸಿದ್ದಪ್ಪ, ಬಿ. ಮುಗ್ದುಂ ಅಜಿತ್ ಸಾವಂತ್, ರಮೇಶ್ ಮಾನೆ, ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನಿರ್ಗಮಿತ ಜಿಲ್ಲಾಧಿಕಾರಿ ಡಿಸಿ ರಮೇಶ್ ಅವರಿಗೆ ಸನ್ಮಾನದ ಹೊಳೆ, ಅಭಿಮಾನದ ಮಾತಿನ ಸುರಿಮಳೆ



ದಾವಣಗೆರೆ, ಅ.11- ತಮ್ಮ ಕಾರ್ಯಾವಧಿಯಲ್ಲಿ ಜಿಲ್ಲೆಯಲ್ಲಿ ಹುಮ್ಮಸ್ಸಿನೊಂದಿಗೆ ಅಭಿವೃದ್ಧಿ ಕೆಲಸಗಳು ಹಾಗೂ ಜನರಿಗೆ ಆತ್ಮೀಯವಾಗಿ ಸ್ಪಂದಿಸಿ ಜನಮನ ಗೆದ್ದ ನಿರ್ಗಮಿತ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರಿಗೆ ಜಿಲ್ಲಾಡಳಿತ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆ ಹಾಗೂ ರೈತರು, ಸಾರ್ವಜನಿಕವಾಗಿ ಸನ್ಮಾನ, ಕೃತಜ್ಞತೆಯ ಹೊಳೆಯ ಜೊತೆಗೆ ಅಭಿಮಾನದ ಮಾತಿನ ಸುರಿಮಳೆಯೇ ಹರಿಯಿತು.

ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಡಿ.ಎಸ್. ರಮೇಶ್ ಅವರಿಗೆ ಬೀಳ್ಕೊಡುಗೆ ಹಾಗೂ ನೂತನ ಜಿಲ್ಲಾಧಿಕಾರಿ ಬಗಾದಿ ಗೌತಮ್ ಅವರಿಗೆ ಸ್ವಾಗತ ಸಮಾರಂಭದಲ್ಲಿ ಜಿಲ್ಲಾಡಳಿತದ ಪರವಾಗಿ ನೂತನ ಜಿಲ್ಲಾಧಿಕಾರಿ ಬಗಾದಿ ಗೌತಮ್ ಅವರು ನಿರ್ಗಮಿತ ಜಿಲ್ಲಾಧಿಕಾರಿ ರಮೇಶ್ ಅವರನ್ನು ಸನ್ಮಾನಿಸಿ ಗೌರವಿಸಿ ಹೃದಯಪೂರ್ವಕವಾಗಿ ಬೀಳ್ಕೊಡಲಾಯಿತು.

ಜಿಲ್ಲಾ ಪೊಲೀಸ್ ಇಲಾಖೆಯಿಂದ ಎಸ್ಪಿ ಆರ್. ಚೇತನ್ ನೇತೃತ್ವದಲ್ಲಿ ನಿರ್ಗಮಿತ ಜಿಲ್ಲಾಧಿಕಾರಿ ರಮೇಶ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾಡಳಿತದ ಅಧಿಕಾರಿ, ಸಿಬ್ಬಂದಿ ವರ್ಗ, ಕಂದಾಯ ಇಲಾಖೆ, ಆರೋಗ್ಯ, ತೋಟಗಾರಿಕೆ, ಮಹಿಳಾ ಮತ್ತು ಕಲ್ಯಾಣ ಇಲಾಖೆ, ಅಗ್ನಿ ಶಾಮಕ ಹೀಗೆ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಸೇರಿದಂತೆ ವಿಶೇಷ ಚೇತನರು, ರೈತರು, ಸಾಮಾಜಿಕ ಕಾರ್ಯಕರ್ತರು, ಪರಿಸರ ಪ್ರೇಮಿಗಳು, ಸಾರ್ವಜನಿಕರು ನಾ ಮುಂದೆ ತಾ ಮುಂದೆ ಎನ್ನುತ್ತಾ ನಿರ್ಗಮಿತ ನೆಚ್ಚಿನ ಜಿಲ್ಲಾಧಿಕಾರಿ ರಮೇಶ್ ಅವರಿಗೆ ಗೌರವದ ಜೊತೆಗೆ ತಮಗೆ ಸ್ಪಂದಿಸಿದ್ದಕ್ಕೆ ಅಭಿಮಾನದ ಮಾತುಗಳ ಮುಖೇನ ಕೃತಜ್ಞತೆಯನ್ನೂ ಅರ್ಪಿಸಲಾಯಿತು.

ಪ್ರೊಬೇಷನರಿ ಉಪವಿಭಾಗಾಧಿಕಾರಿ ಡಾ. ಮಧು ಮಾತನಾಡಿ, ನಿರ್ಗಮಿತ ಜಿಲ್ಲಾಧಿಕಾರಿ ರಮೇಶ್ ಅವರು ಒಳ್ಳೇಯ ಕೆಲಸಗಳ ಕಲಿಕೆ ಮತ್ತು ಸೇವೆಗೆ ನಮಗೆ ಗುರುವಾಗಿ, ಮಾರ್ಗದರ್ಶಕರಾಗಿ ಪ್ರೋತ್ಸಾಹ ನೀಡಿದರು. ಪ್ರತಿಯೊಂದು ಜನಸೇವಾ ಕಾರ್ಯಗಳಿಗೂ ಬೆಂಬಲವಾಗಿದ್ದರು ಎಂದು ತಿಳಿಸಿದರು.

ಸಾರ್ವಜನಿಕರ ಪರವಾಗಿ ಮಾತನಾಡಿದ ಎನ್.ಜಿ. ಪುಟ್ಟಸ್ವಾಮಿ, ರಮೇಶ್ ಅವರಂತಹ ಉತ್ತಮ ಜಿಲ್ಲಾಧಿಕಾರಿಗಳು ಸಿಗುವುದು ವಿರಳ. ಇವರಂತೆ ಪ್ರಾಮಾಣಿಕವಾಗಿ ಇತರೆ 30 ಜಿಲ್ಲೆಗಳಲ್ಲೂ ಕೆಲಸ ಮಾಡಿದರೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದನೆ ಸಿಗಲು ಸಾಧ್ಯ. ಯಾವುದೇ ಕಪ್ಪು ಚುಕ್ಕೆ ಇಲ್ಲದ ನಿಷ್ಠಾವಂತ ಅಧಿಕಾರಿ ರಮೇಶ್ ಅವರನ್ನು ವರ್ಗಾಯಿಸಿ ಬೇರೆ ಕಡೆ ಇನ್ನೂ ಜಾಗ ತೋರಿಸದಿರುವುದು ಸರಿಯಲ್ಲ ಎಂದು ಸಮ್ಮಿಶ್ರ ಸರ್ಕಾರದ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ತ್ರಿಪುಲಾಂಬ, ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ, ಎಂ.ಜಿ. ಶ್ರೀಕಾಂತ್, ಮಂಜುನಾಥ್ ಗುಂಡಾಲ್, ವಿದ್ಯಾರ್ಥಿ ಸಂಘದ ಬೀರೇಶ್ ಮತ್ತಿತರರು ರಮೇಶ್ ಅವರ ಕಾರ್ಯವೈಖರಿ, ಸ್ಪಂದನೆಯ ಬಗ್ಗೆ ಅಭಿಮಾನದ ಮಾತುಗಳನ್ನಾಡಿದರು.

### ತ್ಯಾಗ, ಸೇವೆ ಇದ್ದವರು ಎತ್ತರಕ್ಕೆ ಬೆಳೆಯಬಲ್ಲರು ಎಂಬುದಕ್ಕೆ ರಮೇಶ್ ಅವರೇ ಸಾಕ್ಷಿ

ನಿರ್ಗಮಿತ ಡಿಸಿ ರಮೇಶ್ ಅವರು ಕಷ್ಟ ಪರಿಹಾರಕ, ವಿಘ್ನ ನಿವಾರಕ ಗಣಪನಂತೆ. ತಾಳ್ಮೆ, ಸಹನೆಯ ಮನಸ್ಸುಳ್ಳ ಅವರು ಮನೆಯ ಜೊತೆ ಮಾರನ್ನೂ ಗೆದ್ದಿದ್ದಾರೆ. ಊಟ-ತಿಂಡಿ ಬಿಟ್ಟು ಜನಸೇವೆಗೆ ತಮ್ಮನ್ನು ಮುಡಿಪಾಗಿಟ್ಟರು. ತ್ಯಾಗ, ಸೇವೆ ಇದ್ದವರು ಎತ್ತರಕ್ಕೆ ಬೆಳೆಯಬಲ್ಲರು ಎಂಬುದಕ್ಕೆ ರಮೇಶ್ ಅವರೇ ಸಾಕ್ಷಿ. ತಾಯಿ- ಮನೆಯವರ ಹಾರೈಕೆಯಿಂದ ಜ್ಯೋತಿಯಾಗಿ ಬೆಳಗುತ್ತಿದ್ದಾರೆ.

- ಯರ್ರಿಸ್ವಾಮಿ, ಮ್ಯಾನೇಜರ್, ಲೀಡ್ ಬ್ಯಾಂಕ್

### ಮನಸ್ಸನ್ನು ಬಿಳಿ ಹಾಳೆಯಾಗಿ ತಂದು ಕೆಲಸ ಮಾಡಿದ್ದರ ಪರಿಣಾಮ ಸಾಧನೆ ಸಾಧ್ಯವಾಗಿದೆ

ನಿರ್ಗಮಿತ ಜಿಲ್ಲಾಧಿಕಾರಿಗಳು ಜನರಿಗೆ ಉತ್ತಮ ಸ್ಪಂದನೆ ನೀಡಿದ್ದಾರೆ. ಹೀಗೆ ಸ್ಪಂದನೆ ತೋರುವ ಮೇಲಾಧಿಕಾರಿಗಳಿಗೆ ಕೆಳ ಹಂತದ ಅಧಿಕಾರಿ ವರ್ಗದ ಸಹಕಾರವಿದ್ದರೆ ಸಾರ್ವಜನಿಕರ ಕೆಲಸ-ಕಾರ್ಯಗಳು ಸುಗಮವಾಗಲಿವೆ. ಅಧಿಕಾರಿ ವರ್ಗ ಸೇತುವೆಯಂತೆ ಕಾರ್ಯ ನಿರ್ವಹಿಸಬೇಕಿದೆ. ರಮೇಶ್ ಅವರು ಮನೆಯಿಂದ ಬರುವಾಗ ತಮ್ಮ ಮನಸ್ಸನ್ನು ಬಿಳಿ ಹಾಳೆಯಾಗಿ ತಂದು ಕೆಲಸ ಮಾಡಿದ್ದರ ಪರಿಣಾಮ ಸಾಧನೆ ಸಾಧ್ಯವಾಗಿದೆ.

- ಬಲ್ಲೂರು ರವಿಕುಮಾರ್, ರೈತ ಮುಖಂಡ

# ಉದ್ಯೋಗಿನಿ ಯೋಜನೆಯಡಿ ಮಹಿಳೆಯರಿಂದ ಅರ್ಜಿ

ದಾವಣಗೆರೆ, ಅ.11- ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಉದ್ಯೋಗಿನಿ ಯೋಜನೆಯಡಿ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಬ್ಯಾಂಕುಗಳ ಸಹಯೋಗ ದೊಂದಿಗೆ ಸಾಲದ ವ್ಯವಸ್ಥೆ ಹಾಗೂ ನಿಗಮದಿಂದ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗಾಗಿ ದಾವಣಗೆರೆ- 08192-263219, ಹರಿಹರ-08192-241431, ಹರಪನ ಹಳ್ಳಿ-08398-280251, ಹೊನ್ನಾಳಿ-08188-251283, ಜಗಳೂರು-08196-227132, ಚನ್ನಗಿರಿ- 08189-228010 ಸಂಪರ್ಕಿಸಬಹು ದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ಹರಪನಹಳ್ಳಿಯಲ್ಲಿ ಇಂದು ತಾಲ್ಲೂಕಿನ ಚರಿತ್ರೆ - ಸಂಸ್ಕೃತಿ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ (ಹರಪನಹಳ್ಳಿ) ಇವರುಗಳ ಸಹಯೋಗದಲ್ಲಿ ಇಂದು ಮತ್ತು ನಾಳೆ ಹೈದರಾಬಾದ್ ಕರ್ನಾಟಕದ ಹರಪನಹಳ್ಳಿ ತಾಲ್ಲೂಕಿನ ಚರಿತ್ರೆ ಮತ್ತು ಸಂಸ್ಕೃತಿ ವಿಚಾರ ಸಂಕಿರಣವನ್ನು ಎಸ್.ಯು.ಜೆ.ಎಂ. ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮವನ್ನು ಡಾ. ಎಸ್. ಅಂಬುಜಾಕ್ಷಿ ಉದ್ಘಾಟಿಸುವರು. ಬಿ. ಭರತ್ ಭೂಷಣ್ ಅಧ್ಯಕ್ಷತೆ ವಹಿಸುವರು. ಪ್ರಾಸ್ತಾವಿಕ ನುಡಿಯನ್ನು ಸದಾನಂದ ನಲ್ಕುದುರೆ ನಡೆಸಿಕೊಡುವರು. ಹೆಚ್. ಮಲ್ಲಿಕಾರ್ಜುನ ದಿಕ್ಸೂಚಿ ಭಾಷಣ ನಡೆಸಿ ಕೊಡುವರು. ಮುಖ್ಯ ಅತಿಥಿಗಳಾಗಿ ಕುಂ.ಬಾ ಸದಾಶಿವಪ್ಪ, ಎಲ್. ಕೃಷ್ಣಸಿಂಗ್ ಆಗಮಿಸುವರು.

ನಂತರ ನಡೆಯುವ ಗೋಷ್ಠಿ-01 ಅಧ್ಯಕ್ಷತೆಯನ್ನು ಡಾ. ಎಂ. ಕೊಟ್ರೇಶ್ ವಹಿಸಲಿದ್ದು, ಹರಪನಹಳ್ಳಿ ತಾಲ್ಲೂಕಿನ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ ಬಗ್ಗೆ ತಿಳಿಸಿಕೊಡುವರು. ಮತ್ತು ಡಾ. ಪಿ. ನಾಗಭೂಷಣಗೌಡ ಅವರು ಹರಪನಹಳ್ಳಿ ಪಾಳೇಗಾರರ ಸಾಂಸ್ಕೃತಿಕ ಕೊಡುಗೆಗಳು ಬಗ್ಗೆ ಮಾತನಾಡಲಿದ್ದಾರೆ.

# ಚಿತ್ರದುರ್ಗದಲ್ಲಿ ನಾಳೆ ಬಂಡಾಯ ಸಂಘಟನೆಯಿಂದ ಸಾಹಿತ್ಯ ಸಂವಾದ

ಚಿತ್ರದುರ್ಗ, ಅ. 11- ಬಂಡಾಯ ಸಂಘಟನೆಯಿಂದ ನಾಡಿದ್ದು ದಿನಾಂಕ 13 ಮತ್ತು 14 ರಂದು ಇಲ್ಲಿನ ತರಾಸು ರಂಗಮಂದಿರದಲ್ಲಿ ಸಾಹಿತ್ಯ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 'ಭಾರತೀಯ ಸಾಹಿತ್ಯ ಮತ್ತು ಬಂಡಾಯ ಪರಂಪರೆ' ವಿಷಯದ ಮೇಲೆ ಈ ಸಾಹಿತ್ಯ ಸಂವಾದ ಕಾರ್ಯಕ್ರಮ ನಡೆಯಲಿದೆ. ದಿನಾಂಕ 13 ರಂದು ಬೆಳಿಗ್ಗೆ 10 ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ.

ಕನ್ನಡವನ್ನೂ ಒಳಗೊಂಡಂತೆ ದಕ್ಷಿಣ ಭಾರತದ ಎಲ್ಲಾ ಭಾಷಾ ಸಾಹಿತ್ಯದ ಜೊತೆಗೆ ಹಿಂದಿ, ಉರ್ದು, ಪಂಜಾಬಿ, ಅಸ್ಸಾಮಿ, ಕಾಶ್ಮೀರ, ಗುಜರಾತಿ, ಮರಾಠಿ ಮುಂತಾದ ಸಾಹಿತ್ಯಗಳ ಬಂಡಾಯ ಪರಂಪರೆಯ ಬಗ್ಗೆಯೂ ವಿಷಯ ಮಂಡನೆ ಮಾಡಲಾಗುವುದು.

# ವಿಪ್ರೋ ಕಂಪನಿಗೆ ಬಾಪೂಜಿ ಹೈಟೆಕ್ ಕಾಲೇಜಿನ 13 ವಿದ್ಯಾರ್ಥಿಗಳು ಆಯ್ಕೆ

ದಾವಣಗೆರೆ,ಅ.11- ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ಕಾಲೇಜಿನ 13 ವಿದ್ಯಾರ್ಥಿಗಳು ಅಂತರ ರಾಷ್ಟ್ರೀಯ ಕಂಪನಿ ವಿಪ್ರೋ ಸಂಸ್ಥೆಗೆ ಆಯ್ಕೆಯಾಗಿದ್ದಾರೆ.

ಕಾಲೇಜಿನ ಆವರಣದಲ್ಲಿ ವಿಪ್ರೋ ಕಪಂನಿ ಮೊನ್ನೆ ನಡೆಸಿದ ಸಂದರ್ಶನದಲ್ಲಿ ಸಿ.ಎಸ್. ಸಮರ್ಥ್, ಕೆ.ವಿನಯ್ ಕುಮಾರ್, ಡಿ.ಎ. ರಕ್ಷಿತ, ಎಂ.ಕೆ. ಮನೋಜ್, ಎಸ್.ಸಿ. ಕಾವ್ಯ, ಕೆ. ಜ್ಯೋತಿ, ಅರ್ಘಾನ್ ಅಲಿ, ರಾಧಿಕ ಮೇಲಗೋಡೆ, ಎಂ. ಪೂಜಾ, ಎಂ ಮನೋಜ್, ಬಿ.ಎಂ. ವಿನುತ ಅವರುಗಳು ಆಯ್ಕೆಯಾಗಿದ್ದಾರೆ.

ವಿಪ್ರೋ ಕಂಪನಿಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಅಥಣಿ ವೀರಣ್ಣ, ಪ್ರಾಂಶುಪಾಲ ಡಾ. ಬಿ. ವೀರಪ್ಪ ಮತ್ತು ಉಪನ್ಯಾಸಕ ವೃಂದದವರು ಅಭಿನಂದಿಸಿದ್ದಾರೆ.

# ಸಾದರ ನೌಕರರ ಬಳಗದಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

ದಾವಣಗೆರೆ, ಅ.11- ಸರ್ಕಾರಿ ಕೋಟಾದಲ್ಲಿ ವೈದ್ಯಕೀಯ ಸೀಟು ಪಡೆದು ವಿದ್ಯಾಭ್ಯಾಸ ನಡೆಸುತ್ತಿರುವ ಆರ್ಥಿಕವಾಗಿ ದುರ್ಬಲರಾಗಿರುವ ಸಾದರ ಲಿಂಗಾಯಿತ ಸಮಾಜದ ವಿದ್ಯಾರ್ಥಿಗಳಿಗೆ ಸಾದರ ನೌಕರರ ಬಳಗವು ಪ್ರತಿ ವರ್ಷ ತಲಾ ರೂ. 10,000/-ದಂತೆ 5 ವರ್ಷಗಳ ವಿದ್ಯಾರ್ಥಿ ವೇತನ ನೀಡಲಿದ್ದು, ಇದರ ಪ್ರಯೋಜನ ಪಡೆಯುವಂತೆ ತಿಳಿಸಲಾಗಿದೆ. ಆಸಕ್ತರು ಇದೇ ದಿನಾಂಕ 15 ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಸಾದರ ನೌಕರರ ಬಳಗದ ಅಧ್ಯಕ್ಷ ಕೆ. ನಾಗಪ್ಪ (9844369744, 9243312478) ತಿಳಿಸಿದ್ದಾರೆ.

# ಮಲಬಾರ್ : ಬ್ರೈಡ್ ಆಫ್ ಇಂಡಿಯಾ ಆಯ್ಕೆ




ದಾವಣಗೆರೆ, ಅ. 11 - ಬ್ರೈಡ್ಸ್ ಆಫ್ ಇಂಡಿಯಾ ಅಭಿಯಾನ ಸೀಸನ್ 6ರ ಅಂಗವಾಗಿ ಉಚಿತ ಹನಿಮೂನ್ ಟ್ರಿಪ್‌ನ ಏಳನೇ ಸುತ್ತಿನಲ್ಲಿ ಅದೃಷ್ಟ ವಿಜೇತರನ್ನು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಆಯ್ಕೆ ಮಾಡಿದೆ.

ನಗರದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಶಾಖೆಯಲ್ಲಿ 7ನೇ ಡ್ರಾ ಅನ್ನು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ನ ಗ್ರಾಹಕರು ನೆರವೇರಿಸಿದರುರು. ವೊಡ್ಡಿನಹಳ್ಳಿ ಗ್ರಾಮದ ಗ್ರಾಹಕರಾದ ವಿ.ಕೆ. ಮಮತ, ಪಿ. ಸಂತೋಷ್, ಚನ್ನಗಿರಿ ತಾಲ್ಲೂಕಿನವರನ್ನು ಡ್ರಾ ಮುಖಾಂತರ ಇವರನ್ನು ಮಲೇಷಿಯಾ ಟ್ರಿಪ್‌ಗೆ ಆಯ್ಕೆ ಮಾಡಲಾಯಿತು. ಈ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಶಾಖಾ ಮುಖ್ಯಸ್ಥ ಬೇಸಲ್ ರಾಜನ್ ಹಾಗೂ ಅಮ್‌ಜದ್ ಮತ್ತಿತರರು ಉಪಸ್ಥಿತರಿದ್ದರು.

# ಸುಭಾಷ್ ಘಾಯ್ ವಿರುದ್ಧ ಅತ್ಯಾಚಾರದ ಆರೋಪ



ನವದೆಹಲಿ, ಅ. 11 - ಮಹಿಳೆಯರು ತಮ್ಮ ಮೇಲೆ ನಡೆದ ಲೈಂಗಿಕ ದೌರ್ಜನ್ಯವನ್ನು ಬಹಿರಂಗ ಪಡಿಸುವ 'ಮಿಟೂ' ಅಭಿಯಾನದ ಬಿಸಿ ಈಗ ಬಾಲಿವುಡ್‌ನ ದಿಗ್ಗಜ ನಿರ್ದೇಶಕ ಸುಭಾಷ್ ಘಾಯ್ ಅವರಿಗೆ ತಟ್ಟಿದೆ.

ಘಾಯ್ ಮಹಿಳೆಯೊಬ್ಬರಿಗೆ ಮಾದಕ ಪಾನಿಯ ಕುಡಿಸಿ ಅತ್ಯಾಚಾರ ಎಸಗಿದ್ದರು ಎಂದು ಮಹಿಮಾ ಕುಕ್ರೇಜಾ ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ. ಕುಕ್ರೇಜಾ ಈ ಹಿಂದೆ ಹಾಸ್ಯ ಕಲಾವಿದ ಉತ್ಸವ್ ಚಕ್ರವರ್ತಿ ವಿರುದ್ಧ ಲೈಂಗಿಕ ಪೀಡನೆಯ ಆರೋಪ ಮಾಡಿದ್ದರು.

ಘಾಯ್ ವಿರುದ್ಧ ಆರೋಪಿಸಿರುವ ಮಹಿಳೆ ನಂಬಿಕಾರ್ಹರಾಗಿದ್ದು, ಸಾಹಿತ್ಯದ ಹಿನ್ನೆಲೆಯವರಾಗಿದ್ದಾರೆ. ಅವರು ತಮ್ಮ ಹೆಸರು ಬಹಿರಂಗ ಪಡಿಸಲು ಬಯಸುತ್ತಿಲ್ಲ ಎಂದು ಕುಕ್ರೇಜಾ ಹೇಳಿದ್ದಾರೆ.

ಕೆಲ ವರ್ಷಗಳ ಹಿಂದೆ ಅವರು ಘಾಯ್ ಜೊತೆ ಕೆಲಸ ಮಾಡಿದ್ದರು. ಆಗ ಅವರ ಬಗ್ಗೆ ಘಾಯ್ ಅತಿಯಾದ ಆಸಕ್ತಿ ತೋರಿಸಿದ್ದರು. ಚಿತ್ರಕಥೆ ರೂಪಿಸಲೆಂದು ಅಪಾರ್ಟ್ ಮೆಂಟ್‌ಗೆ ಕರೆದಾಗ, ಬಲವಂತವಾಗಿ ಚುಂಬಿಸಿದ್ದರು. ನಂತರ ಈ ಬಗ್ಗೆ ಮಹಿಳೆ ಸಹಾಯಕ ನಿರ್ದೇಶಕ ಹಾಗೂ ಇಬ್ಬರು ಮಹಿಳೆಯರಿಗೆ ತಿಳಿಸಿದ್ದರು. ಆದರೆ, ಆ ಸಮಯದಲ್ಲಿ ಉದ್ಯೋಗದ ಭದ್ರತೆ ಹಾಗೂ ಹಣಕಾಸು ಭದ್ರತೆ ಇರದ ಕಾರಣ ಸುಮ್ಮನಾಗಿದ್ದರು.

ನಂತರ ಸಂಗೀತ ಗೋಷ್ಠಿಯೊಂದರಲ್ಲಿ ಘಾಯ್ ಮಹಿಳೆಗೆ ಮದ್ಯಪಾನ ಮಾಡಿಸಿದ್ದರು. ಹೋಟೆಲ್ ಕೋ ಣೆ ಯೊ ೦ ದ ಕ್ಕೆ ಕರೆದುಕೊಂಡು ಹೋಗಿ ಲೈಂಗಿಕವಾಗಿ ಹಲ್ಲೆ ನಡೆಸಿದ್ದರು ಎಂದು ಆರೋಪಿಸಲಾಗಿದೆ. ಈ ಆರೋಪಗಳನ್ನು ತಳ್ಳಿ ಹಾಕಿರುವ ಘಾಯ್, ಯಾವುದೋ ಕಥೆ ಹೆಣೆದು ಯಾರದೋ ಮೇಲೆ ಆರೋಪ ಮಾಡುವುದು ಈಗ ಫ್ಯಾಷನ್ ರೀತಿ ಆಗಿದೆ ಎಂದಿದ್ದಾರೆ.

ಹಾಗೇನಾದರೂ ಘಟನೆ ನಡೆದಿದ್ದರೆ ಕೋರ್ಟ್‌ಗೆ ಹೋಗಿ ಸಾಬೀತು ಪಡಿಸಬೇಕು. ಇಲ್ಲವಾದರೆ ನಾನು ಮಾನನಷ್ಟ ಮೊಕದ್ದಮೆ ಹೂಡುತ್ತೇನೆ ಎಂದವರು ತಿಳಿಸಿದ್ದಾರೆ.

# ಹರಿಹರ : ಕಸಬಾ ಊರಮ್ಮ ಗ್ರಾಮದೇವತೆಯ ಶರನ್ನವರಾತ್ರಿ



ಶ್ರೀ ಕಸಬಾ ಊರಮ್ಮ ಗ್ರಾಮದೇವತೆ ಸಮಿತಿ ಹೊಸಭರಂಪುರದ ವತಿಯಿಂದ ಶ್ರೀ ದೇವಿ ಶರನ್ನವರಾತ್ರಿ ಮಹೋತ್ಸವ ಆರಂಭಗೊಂಡಿದೆ. ಇಂದು ಸವದತ್ತಿ ಯಲ್ಲಮ್ಮ ದೇವಿ ಅಲಂಕಾರ, ನಾಳೆ ಕಟೀಲು ದುರ್ಗಾಪರಮೇಶ್ವರಿ ಅಲಂಕಾರ, 14 ರಂದು ಶೃಂಗೇರಿ ಶಾರದಾಂಭ ದೇವಿ ಅಲಂಕಾರ, 15 ರಂದು ಬಾದಮಿ ಬನಶಂಕರಿದೇವಿ ಅಲಂಕಾರ, 17 ರಂದು ಸಿಗಂಧೂರು ಚೌಡೇಶ್ವರಿ ದೇವಿ ಅಲಂಕಾರ, 18 ರಂದು ಮಹಿಷಾಸುರ ಮರ್ಧಿನಿ ಅಲಂಕಾರ 19 ರಂದು ಬನ್ನಿಮಹಾಂಕಾಳಿದೇವಿ ಅಲಂಕಾರ ನಡೆಯುತ್ತವೆ. ಪ್ರತಿದಿನ ಸಂಜೆ ದೇವಿಗೆ ವಿವಿಧ ಮಹಿಳಾ ಮಂಡಳಿಗಳಿಂದ ಕುಂಕಮಾರ್ಚನೆ, ಭಜನೆ ಹಾಗೂ ಲಲಿತಾ ಸಹಸ್ರನಾಮ ನಂತರ ಮಹಾಮಂಗಳಾರತಿ ನಡೆಯುತ್ತದೆ.

# ಪೊಲೀಸರ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ವಕೀಲರ ಸಂಘದ ಸದಸ್ಯನಲ್ಲ: ಸ್ಪಷ್ಟನೆ

ದಾವಣಗೆರೆ, ಅ.11- ಕರ್ತವ್ಯ ನಿರತ ಪೊಲೀಸರ ಮೇಲೆ ವ್ಯಕ್ತಿಯೋರ್ವ ನಿನ್ನೆ ಹಲ್ಲೆ ಮಾಡಿದ್ದು, ಆ ವ್ಯಕ್ತಿ ವಕೀಲರ ಸಂಘದ ಸದಸ್ಯನಲ್ಲ ಎಂದು ಜಿಲ್ಲಾ ವಕೀಲರ ಸಂಘ ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದೆ.

ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲ ತಾಣಗಳಲ್ಲಿ ವಕೀಲನಿಂದ ಪೊಲೀಸರ ಮೇಲೆ ಹಲ್ಲೆ ಎಂಬ ಸುದ್ದಿ ಹರಡಿದೆ. ಆದರೆ, ಆ ವ್ಯಕ್ತಿ ಕುರಿತು ಯಾವ ಮಾಹಿತಿಯೂ ಸಂಘದಲ್ಲಿ ಲಭ್ಯವಿಲ್ಲವಾದ್ದರಿಂದ ಆತ ವಕೀಲನಾಗಿರಲು ಸಾಧ್ಯವಿಲ್ಲ ಎಂದು ಹೇಳಿದರು. ಜಿಲ್ಲಾ ವಕೀಲರ ಸಂಘವು ಸೌಹಾರ್ದತೆಗೆ ಹೆಸರಾಗಿದೆ. ಪೊಲೀಸರ ಮೇಲೆ ನಡೆದ ಹಲ್ಲೆ ಖಂಡನೀಯವಾದದ್ದು ಎಂದವರು ಹೇಳಿದರು ಸಂಘದ ಉಪಾಧ್ಯಕ್ಷ ಹೆಚ್. ದಿವಾಕರ್, ಕಾರ್ಯದರ್ಶಿ ಬಿ.ಎಸ್. ಲಿಂಗರಾಜು, ಜಂಟಿ ಕಾರ್ಯದರ್ಶಿ ಎಸ್. ಬಸವರಾಜ್, ಸದಸ್ಯ ವಿನಯಕುಮಾರ್ ಸಾಹುಕಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಅಕ್ಟೋಬರ್ ಮಾಹೆಯ ಪಡಿತರ ವಿವರ

ದಾವಣಗೆರೆ, ಅ.11- ಅನ್ನಭಾಗ್ಯ ಯೋಜನೆಯಡಿ ಅಕ್ಟೋಬರ್ ಮಾಹೆಗೆ ಪ್ರತಿ ಪಡಿತರ ಚೀಟಿದಾರರಿಗೆ ಪ್ರತಿ ವ್ಯಕ್ತಿಗೆ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ಮತ್ತು ಪ್ರತಿ ಪಡಿತರ ಚೀಟಿಗೆ 1 ಕೆ.ಜಿ. ತೊಗರಿ ಬೇಳೆಯನ್ನು ರೂ.38 ರಂತೆ ವಿತರಿಸಲಾಗುತ್ತಿದ್ದು, ಪಡಿತರ ಚೀಟಿದಾರರು ಪಿಓಎಸ್ ನ್ಯಾಯಬೆಲೆ ಅಂಗಡಿಗಳಲ್ಲಿ ತಮ್ಮ ಬೆರಳು ಗುರುತನ್ನು (ಬಯೋಮೆಟ್ರಿಕ್) ನೀಡಿ ಪಡಿತರವನ್ನು ಪಡೆಯಬಹುದಾಗಿದೆ.

ಈ ಬೆರಳು ಗುರುತನ್ನು ನೀಡಲು ಯಾವುದೇ ಶುಲ್ಕ ಇರುವುದಿಲ್ಲ. ಇದನ್ನು ಉಚಿತವಾಗಿ ಪಡೆಯ ಬೇಕಾಗಿದ್ದು ಪಡಿತರ ಚೀಟಿದಾರರು, ಈ ಬಗ್ಗೆ ಯಾವುದೇ ನ್ಯಾಯಬೆಲೆ ಅಂಗಡಿ ಮಾಲೀಕರು ಹಣ ನೀಡುವಂತೆ ಕೇಳಿದಲ್ಲಿ ದೂರು ನೀಡಲು ಕೆಳಕಂಡ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದು ಹಾಗೂ ಹೊಸ ಪಡಿತರ ಚೀಟಿಗೆ ಸಂಬಂಧಿಸಿದಂತೆ ಈಗಾಗಲೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದವರು ಜಾತಿ/ಆದಾಯ ಪ್ರಮಾಣ ಪತ್ರದೊಂದಿಗೆ ಧನಂಜಯ ದಾವಣಗೆರೆ (ಅಪಪ್ರ) 97403-40846, ರವಿ ಹಿಪ್ಪರಗಿ ದಾವಣಗೆರೆ (ಅಪಪ್ರ) 89046-09709, ಮಹಮ್ಮದ್ ಬುಡೇನ್‌ಸಾಬ್ ದಾವಣಗೆರೆ 94800-65633, ರಮೇಶ್. ಯು.ಆರ್ ಹರಿಹರ 94821-08686, ನಾಗರಾಜ್ ಹೊನ್ನಾಳಿ 91644-99289, ಶಿವಾಜಿ ಹೊನ್ನಾಳಿ 86187-32115, ನೀಲಮ್ಮ ಚನ್ನಗಿರಿ 94819-84951, ಉದಯಕುಮಾರ್ ಚನ್ನಗಿರಿ 94481-52276, ಭರತ್ ಹರಪನಹಳ್ಳಿ 81238-23075, ಮೈಲಾರಪ್ಪ ಹರಪನಹಳ್ಳಿ 99009-81459, ರಾಘವೇಂದ್ರ ಜಗಳೂರು 97984-18213, ಸಂಜಯ್ ಬಾಗೇವಾಡಿ ಜಗಳೂರು 98445-42864 ಇವರನ್ನು ಸಂಪರ್ಕಿಸಿ ಹೊಸ ಪಡಿತರ ಚೀಟಿ ಪಡೆಯಬಹುದು.

# ಮಲೇಬೆನ್ನೂರಿನಲ್ಲಿ ಸಾಮೂಹಿಕ ವಿವಾಹ

ಮಲೇಬೆನ್ನೂರು, ಅ.11- ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 19 ರಿಂದ 25ರವರೆಗೆ ಜರುಗಲಿರುವ ಇದೇ ದಿನಾಂಕ 25ರಂದು ಸಾಮೂಹಿಕ ವಿವಾಹವನ್ನು ಹಮ್ಮಿಕೊಳ್ಳಲಾಗಿದೆ. ವಿವಾಹ ಆಗಲಿಚ್ಛಿಸುವವರು ದಿನಾಂಕ 20 ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಹೆಸರು ನೋಂದಾಯಿಸು ವಂತೆ ಕೆ.ಪಿ. ಗಂಗಾಧರ್ (94483 38799) ತಿಳಿಸಿದ್ದಾರೆ.

# ಮೈಸೂರು ದಸರಾ ಕುಸ್ತಿ ಪಂದ್ಯಾವಳಿ

ದಾವಣಗೆರೆ, ಅ.11- ಮೈಸೂರು ದಸರಾ ಮಹೋತ್ಸವದ ಅಂಗವಾಗಿ 10 ನೇ ರಾಜ್ಯ ಮಟ್ಟದ ಮಹಿಳಾ ಕುಸ್ತಿ ಪಂದ್ಯಾವಳಿ, 36 ನೇ ರಾಜ್ಯ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿ ಹಾಗೂ 2 ನೇ ಮೈಸೂರು ವಿಭಾಗ ಮಟ್ಟದ ಕುಸ್ತಿ ಪಂದ್ಯಾವಳಿ, 4ನೇ ರಾಜ್ಯ ಮಟ್ಟದ ಪುರುಷರ ಮತ್ತು ಮಹಿಳೆಯರ ಪಂಜ ಕುಸ್ತಿ ಪಂದ್ಯಾವಳಿಗಳನ್ನು ಇಂದಿನಿಂದ ಇದೇ ದಿನಾಂಕ 15 ರವರೆಗೆ ಮೈಸೂರಿನ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತು ಪ್ರದರ್ಶನದ ಆವರಣದಲ್ಲಿ ನಡೆಯಲಿದೆ. ದಾವಣಗೆರೆ ಜಿಲ್ಲೆಯ ಆಸಕ್ತ ಕುಸ್ತಿಪಟುಗಳು ಈ ಪಂದ್ಯಾವಳಿಗಳಲ್ಲಿ ಭಾಗವಹಿಸುವಂತೆ ಮೈಸೂರು ದಸರಾ ಮಹೋತ್ಸವದ ಕುಸ್ತಿ ಉಪ ಸಮಿತಿಯ ಕಾರ್ಯದರ್ಶಿ ಡಿ.ರವಿಕುಮಾರ್ ತಿಳಿಸಿದ್ದಾರೆ.

# ಆಧುನಿಕ ಹೈನುಗಾರಿಕೆ ತರಬೇತಿ

ದಾವಣಗೆರೆ, ಅ.11- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶು ವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 15 ರಿಂದ 17 ರವರೆಗೆ ಆಧುನಿಕ ಹೈನುಗಾರಿಕೆ ಕುರಿತು ಉಚಿತ ತರಬೇತಿ ನಡೆಯಲಿದೆ. ರೈತರು, ಮಹಿಳೆಯರು, ನಿರುದ್ಯೋಗಿ ಯುವಕ, ಯುವತಿಯರು ಇದರ ಸದುಪಯೋಗ ಪಡೆಯಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಹೊಳೆಸಿರಿಗೆರೆ : ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನೇಮಕ



ಮಲೇಬೆನ್ನೂರು,ಅ.11- ಹೊಳೆಸಿರಿಗೆರೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯನ್ನು ಹೊಸದಾಗಿ ರಚಿಸಿದ್ದು, ಉಪಾಧ್ಯಕ್ಷರಾಗಿ ಗ್ರಾಮದ ಮಾಜಿ ಸೈನಿಕ ಎನ್. ಪರಶುರಾಮ್ ನೇಮಕಗೊಂಡಿದ್ದಾರೆ. ಸದಸ್ಯರಾಗಿ ಕೆ. ಹನುಮಂತಪ್ಪ, ಸಿ. ಬಸವರಾಜಪ್ಪ, ಎಸ್. ಹೆಚ್. ವೆಂಕಟೇಶ್, ಶ್ರೀಮತಿ ರೂಪಾ, ನೀಲಪ್ಪ ಕರೂರು ನೇಮಕಗೊಂಡಿದ್ದಾರೆ.

# ಸವಳಂಗ : ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕಿನ ಸವಳಂಗ, ಮಾದಾಪುರ, ಚಿನ್ನಿಕಟ್ಟೆ, ಗಂಜೀನಹಳ್ಳಿ, ಕೊಡತಾಳ್ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.

# ವಾಸವಿ ದೇವಿಗೆ ಇಂದು ಅಲಂಕಾರ

ಡಿ.ಸಿ.ಎಂ. ಟೌನ್‌ಶಿಪ್‌ನ ಶ್ರೀ ವಾಸವಿ ದೇವಿಗೆ ದಸರಾ ಅಂಗವಾಗಿ ಇಂದು ನೋಟಿನ ಅಲಂಕಾರ ಏರ್ಪಡಿಸಿದೆ.

# 'ನಮ್ಮ ನಡಿಗೆ ಶರಣ ಸಂಸ್ಕೃತಿಯ ಕಡೆಗೆ' ಕಾರ್ಯಕ್ರಮಕ್ಕೆ ನಾಳೆ ಚಾಲನೆ

ಚಿತ್ರದುರ್ಗ, ಅ. 11- ಇಲ್ಲಿನ ಮುರುಘಾ ಮಠದ ವತಿಯಿಂದ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ನಾಡಿದ್ದು ದಿನಾಂಕ 13 ರಂದು ಬೆಳಿಗ್ಗೆ 8 ರವರೆಗೆ 'ನಮ್ಮ ನಡಿಗೆ ಶರಣಸಂಸ್ಕೃತಿಯ ಕಡೆಗೆ' ಕಾರ್ಯಕ್ರಮಕ್ಕೆ ಚಲನಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಚಾಲನೆ ನೀಡಲಿದ್ದು, ನಟ ದರ್ಶನ್ ಮತ್ತಿತರರು ಭಾಗವಹಿಸಲಿದ್ದಾರೆ.

ಶ್ರೀ ಶಿವಮೂರ್ತಿ ಮುರುಘಾ ಶರಣರು ಈ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಇಂದು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಉತ್ಸವ ಸಮಿತಿ ಪದಾಧಿಕಾರಿಗಳಾದ ಡಿ.ಎಸ್. ಮಲ್ಲಿಕಾರ್ಜುನ್, ಎನ್.ಜಿ. ಶ್ರೀನಿವಾಸ್, ಶ್ರೀ ಶರಣ ಬಸವ ದೇವರು, ಶ್ರೀ ಮಹಾಂತ ಸ್ವಾಮಿಗಳು ದೇವರ ಹಿಪ್ಪರಗಿ, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಚಡಚಣ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯನಿರ್ವಹಣಾ ನಿರ್ದೇಶಕ ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ. ದೊರೆಸ್ವಾಮಿ ಮತ್ತಿತರರಿದ್ದರು.

# ಜಗಳೂರು : ಆದಿಜಾಂಬವ ಸಮಾರಂಭದಲ್ಲಿ ಭಾಗವಹಿಸಲು ಮನವಿ

ಜಗಳೂರು, ಅ.11- ಇದೇ 12ರಂದು ಕರ್ನಾಟಕ ಆದಿಜಾಂಬವ ಅಭಿವೃದ್ದಿ ನಿಗಮ ಲೋಕಾರ್ಪಣೆಗೊಳ್ಳಲಿದೆ. ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಗಳೂರು ತಾಲ್ಲೂಕು ದಲಿತ ಸಂಘರ್ಷ ಸಮಿತಿ ಜಿಲ್ಲಾ ಉಪಾಧ್ಯಕ್ಷ ಜಿ.ಎಚ್ ಶಂಭುಲಿಂಗಪ್ಪ ಮನವಿ ಮಾಡಿದ್ದಾರೆ.

ಪಟ್ಟಣದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಜಿ. ಪರಮೇಶ್ವರ್, ಮಾಜಿ ಸಚಿವ ಎಚ್. ಆಂಜನೇಯ ಅವರ ನಿರಂತರ ಹೋರಾಟದಿಂದ ಪ್ರಥಮ ಹಂತದ ಜಯ ಸಿಕ್ಕಿದೆ ಎಂದರು.

ಮುಂದಿನ ದಿನಗಳಲ್ಲಿ ಸದಾಶಿವ ಆಯೋಗದ ಜಾರಿಗೆ ಒತ್ತಾಯಿಸಿ ನಿರಂತರ ಹೋರಾಟಗಳನ್ನು ನಡೆಸಲಾಗುವುದು. ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿಯವರು ವಿಧಾನಸಭೆಯಲ್ಲಿ ಸರ್ವರ ಒಪ್ಪಿಗೆ ಪಡೆದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ದ.ಸಂ.ಸ ಜಗಳೂರು ತಾಲ್ಲೂಕು ಉಪಾಧ್ಯಕ್ಷ ಹಟ್ಟಿ ತಿಪ್ಪೇಸ್ವಾಮಿ, ತಾಲ್ಲೂಕು ಸಂಚಾಲಕ ಶಿವಮೂರ್ತಿ, ಮುಖಂಡರಾದ ಗೌರಿಪುರ ಸತ್ಯಮೂರ್ತಿ, ಸಿದ್ದಮ್ಮನಹಳ್ಳಿ ಮಂಜುನಾಥ್ ಹಾಗು ಇತರರಿದ್ದರು.

# ನಗರದಲ್ಲಿಂದು ಜ್ಯೂ.ಡಾಕ್ಟರ್ಸ್ ಪ್ರತಿಭಟನೆ

ಜ.ಜ.ಮು. ವೈದ್ಯಕೀಯ ವಿದ್ಯಾರ್ಥಿಗಳ ಶಿಷ್ಯವೇತನವನ್ನು ತಡೆಹಿಡಿದಿರುವ ರಾಜ್ಯ ಸರ್ಕಾರದ ವಿರುದ್ಧ ಜ.ಜ.ಮು. ವೈದ್ಯಕೀಯ ಕಾಲೇಜಿನ ಗೃಹ ವೈದ್ಯರು ಹಾಗೂ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಜೂನಿಯರ್ ಡಾಕ್ಟರ್ಸ್ ಅಸೋಸಿಯೇಷನ್ ಅಡಿಯಲ್ಲಿ ಇಂದು ಬೆಳಿಗ್ಗೆ 9.30 ಕ್ಕೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯಿಂದ ಜಿಲ್ಲಾಧಿಕಾರಿಗಳ ಕಛೇರಿವರೆಗೆ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ನಂತರ ಮನವಿ ಪತ್ರವನ್ನು ಸಲ್ಲಿಸಲಾಗುವುದು ಎಂದು ಅಸೋಸಿಯೇಷನ್‌ನ ಸ್ವರೂಪ್ ಮಲ್ಲೇಶ್ ತಿಳಿಸಿದ್ದಾರೆ.

# ಹರಿಹರದಲ್ಲಿಂದು ಕಚೇರಿ ಉದ್ಘಾಟನೆ

ನೂತನ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಸಮಾಜ ಸಂಘದ ಕಛೇರಿಯನ್ನು ಇಂದು ಮಧ್ಯಾಹ್ನ 12.05ಕ್ಕೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮತ್ತು ಸಂಘದ ಅಧ್ಯಕ್ಷ ಹಂಚಿನ ನಾಗಣ್ಣ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಗುವುದೆಂದು ಸಂಘದ ಖಜಾಂಚಿ ಮಧು ತಿಳಿಸಿದ್ದಾರೆ.

# ನಗರದಲ್ಲಿ ನಾಳೆ ಕೀಲು-ಮೂಳೆ ತಪಾಸಣೆ

ದಾವಣಗೆರೆ,ಅ.11- ಕೀಲು-ಮೂಳೆ ಸವೆತದ ತಪಾಸಣೆ ಮತ್ತು ಸಕ್ಕರೆ ಕಾಯಿಲೆ ನಿರ್ಮೂಲನಾ ಶಿಬಿರವು ದಿನಾಂಕ 13ರ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ನಗರದ ಪಿ.ಜೆ.ಬಡಾವಣೆಯ ಪೊಲೀಸ್ ವಸತಿ ಗೃಹದ ಬಳಿ ಇರುವ 'ಅಕ್ಷರಧಾಮ' ನಿಲಯದಲ್ಲಿ ನಡೆಯಲಿದೆ.

ಡಾ. ಡಿ.ಎಸ್. ಸತ್ಯೇಂದ್ರರಾವ್ ಲೆಗಸಿ ಅಂಡ್ ರಿಸರ್ಚ್ ಫೌಂಡೇಶನ್ ವತಿಯಿಂದ ಈ ಶಿಬಿರ ಏರ್ಪಾಡಾಗಿದೆ ಎಂದು ಶಿಬಿರದ ಸಂಚಾಲಕ ಡಾ. ಡಿ.ಎಸ್. ಸಂತೋಷ್ (91640-63608, 81472 69948) ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

**ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.**

ದೂರವಾಣಿ: 08192-259050, ಫ್ಯಾಕ್ಸ್: 08192-233743

**ಸಂ.ಚಿಜಿಆ/ದಾ/ಹೆಚ್.ಎಂ.ಎಸ್(2)/40/2018-19 ದಿನಾಂಕ: 20-09-2018**

**ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2018-19ನೇ ಸಾಲಿಗೆ ಆಸ್ಪತ್ರೆಯ ಎಲ್ಲಾ ವಿಭಾಗಗಳಿಗೆ ಅತೀ ಅವಶ್ಯಕವಾಗಿ ತುರ್ತಾಗಿ ಬೇಕಾಗಿರುವ ಲಿಫ್ಟ್‌ನ್ನು ಖರೀದಿ ಮಾಡಲು ಕರ್ನಾಟಕ ಸಾರ್ವನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ ಪ್ರಕಾರ **ಇ-ಪ್ರಕ್ಯೂರ್‌ಮೆಂಟ್** ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ **ಟೆಂಡರ್** ಕರೆಯಲಾಗಿದೆ.

1) Commencement of download of e-Tender Form from website- http//eproc.karnataka.gov.in : **ದಿನಾಂಕ: 20/09/2018 ರಿಂದ ದಿನಾಂಕ: 20/10/2018ರ ಮಧ್ಯಾಹ್ನ 4.30 ಘಂಟೆಯವರೆಗೆ.** 2) Pre Bid Meeting **ದಿನಾಂಕ: 10/10/2018 ರಂದು ಬೆಳಿಗ್ಗೆ 11.00 ಘಂಟೆಗೆ.** 3) Last Date for Uploading of Tender in e-procurement platform on or before: **ದಿ: 20/10/2018 ರಂದುಮಧ್ಯಾಹ್ನ 4.30 ಘಂಟೆಯವರೆಗೆ.** 4) Opening of Techno-Commercial Bid: **ದಿನಾಂಕ: 23/10/2018 ರಂದು ಬೆಳಗ್ಗೆ 11.00 ಘಂಟೆಯವರೆಗೆ.** 5) Financial bid opening: Will be intimated.

ಸಹಿ/- **ಅಧೀಕ್ಷಕರು,**
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.

ವಾಸಾಇ/ಡಿವಿಜಿ/340/ಎಂಸಿಎ/2018-19

## ರಾಣೇಬೆನ್ನೂರ ಕಾ ರಾಜಾ ಗಣೇಶನಿಗೆ ಡಿಜೆ ಅಬ್ಬರದ ಮೂಲಕ ವಿದಾಯ



ರಾಣೆಬೆನ್ನೂರು, ಅ.11- ಇಲ್ಲಿನ ರಾಣೇಬೆನ್ನೂರ ಕಾ ರಾಜಾ ಗಣೇಶನನ್ನು ಗುರುವಾರ ಅತ್ಯಂತ ಸಡಗರ ಸಂಭ್ರಮದಿಂದ ವಿಸರ್ಜನೆ ಮಾಡಲಾಯಿತು.

ಇಲ್ಲಿನ ಕುರುಬಗೇರಿ ಕ್ರಾಸ್‌ನಿಂದ ಸಂಜೆ ಪ್ರಾರಂಭವಾದ ವಿಸರ್ಜನಾ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ನಂತರ ಬೈಪಾಸ್ ರಸ್ತೆಯ ಮೂಲಕ ಹರಿಹರಕ್ಕೆ ತೆರಳಿ ತುಂಗಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು.

ಮೆರವಣಿಗೆಯಲ್ಲಿ ಆನೆ, ಡೊಳ್ಳು ಕುಣಿತ, ಕೋಲಾಟ, ಗೊಂಬೆ ವೇಷಧಾರಿಗಳು ಸೇರಿದಂತೆ ವಿವಿಧ ಕಲಾತಂಡಗಳು ಪಾಲ್ಗೊಂಡಿದ್ದವು. ಈ ಬಾರಿ ಡಿಜೆ ಹಚ್ಚಲು ಪರವಾನಿಗೆ ಲಭಿಸಿದ್ದರಿಂದ ಯುವ ಜನತೆ ಹೆಚ್ಚಿನ ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ದಾರಿಯುದ್ದಕ್ಕೂ ಜನರು ಕುತೂಹಲದಿಂದ ಮೆರವಣಿಗೆಯನ್ನು ವೀಕ್ಷಿಸಿದರು.

ಇತ್ತೀಚಿಗೆ ನಗರದಲ್ಲಿ ವಿಶ್ವ ಹಿಂದೂ ಪರಿಷತ್ ಗಣಪತಿ ವಿಸರ್ಜನೆ ವೇಳೆ ಗಲಾಟೆ ಸಂಭವಿಸಿದ ಹಿನ್ನೆಲೆಯಲ್ಲಿ ಮೆರವಣಿಗೆ ಸಾಗಿ ಬರುವ ದಾರಿಯುದ್ದಕ್ಕೂ ಪ್ರತಿ ನೂರು ಮೀಟರ್‌ಗೆ ಒಂದು ಬ್ಯಾರಿಕೇಡ್ ನಿರ್ಮಿಸುವ ಮೂಲಕ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

# ಸಂಯಮದ ಡಿ.ಸಿ.ಗೆ ಬೀಳ್ಕೊಡುಗೆ, ಶಿಸ್ತಿನ ಡಿ.ಸಿ.ಗೆ ಸ್ವಾಗತ

### ನಿಕಟಪೂರ್ವ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್‌ಗೆ ಬೀಳ್ಕೊಡುಗೆ, ನೂತನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್‌ಗೆ ಸ್ವಾಗತ

ದಾವಣಗೆರೆ, ಅ. 11 - ಸರಳತೆ, ಸಂಯಮ, ಹಸನ್ಮುಖಿ ಗುಣಗಳನ್ನು ಹೊಂದಿ ಜಿಲ್ಲೆಯಲ್ಲಿ ಎರಡು ವರ್ಷ ನಾಲ್ಕು ತಿಂಗಳ ಕಾಲ ಕಾರ್ಯನಿರ್ವಹಿಸಿ ವರ್ಗಾವಣೆಯಾಗಿರುವ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರಿಗೆ ಜಿಲ್ಲಾಡಳಿತದ ವತಿಯಿಂದ ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಸಂಜೆ ಆತ್ಮೀಯವಾಗಿ ಸನ್ಮಾನಿಸಲಾಯಿತು. ಇದೇ ವೇಳೆ, ನೂತನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರನ್ನು ಸ್ವಾಗತಿಸಲಾಯಿತು.

ಚುನಾವಣೆಯಂತಹ ಅತ್ಯಂತ ಒತ್ತಡದ ಸೂಕ್ಷ್ಮ ಸನ್ನಿವೇಶವನ್ನೂ ಸಹ ರಮೇಶ್ ಅತ್ಯಂತ ಸಂಯಮ - ಸಹನೆಯಿಂದ ನಿರ್ವಹಿಸಿದ್ದರು. ಇದರಿಂದಾಗಿ ಅಧಿಕಾರ ಸಮೂಹದ ಮೇಲಿನ ಒತ್ತಡ ಸಾಕಷ್ಟು ಕಡಿಮೆಯಾಯಿತು ಎಂದು ಈ ಸಂದರ್ಭದಲ್ಲಿ ಮಾತನಾಡಿದ ಅಧಿಕಾರಿಗಳು ತಿಳಿಸಿದರು.

ನೂತನ ಜಿಲ್ಲಾಧಿಕಾರಿ ಬಗಾದಿ ಗೌತಮ್ ಅವರು ಶಿಸ್ತಿನ ಕಾರ್ಯ ನಿರ್ವಹಣೆಗೆ ಈಗಾಗಲೇ ಹೆಸರು ಮಾಡಿದ್ದು, ಅವರ ಆಶಯಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಿ ಜಿಲ್ಲೆಯ ಪ್ರಗತಿಗೆ ಹೆಗಲು ಕೊಡುವುದಾಗಿಯೂ ಅಧಿಕಾರಿಗಳು ಇದೇ ಸಂದರ್ಭದಲ್ಲಿ ಬದ್ಧತೆ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್ ಮಾತನಾಡಿ, ಚುನಾವಣೆಯ ಸವಾಲಿನ ಸಂದರ್ಭದಲ್ಲಿ ನಾನು ಜಿಲ್ಲೆಯ ಅಧಿಕಾರ ಸ್ವೀಕರಿಸಿದ್ದೆ. ಆ ಸಂದರ್ಭದಲ್ಲಿ ಸಂಯಮ, ಶಿಸ್ತು, ಸುಸಂಸ್ಕೃತ ಅಧಿಕಾರಿಯಾಗಿರುವ ರಮೇಶ್ ಸಕಾರಾತ್ಮಕ ಮನೋಭಾವದಿಂದ ಕಾರ್ಯ ನಿರ್ವಹಿಸಿದ್ದರಿಂದ, ಚುನಾವಣಾ ಕಾರ್ಯ ಅತ್ಯಂತ ಸುಲಲಿತವಾಯಿತು. ಚುನಾವಣೆ ಹೋರೆಯಾಗುವ ಬದಲು, ಶಾಂತಿಯುತ ಪ್ರಕ್ರಿಯೆ ಆಯಿತು ಎಂದರು.

ಜಿಲ್ಲಾಧಿಕಾರಿಗಳ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕರಾದ ಶ್ರೀಮತಿ ಪದ್ಮಾ ಬಸವಂತಪ್ಪ ಮಾತನಾಡಿ, ಬಗಾದಿ ಗೌತಮ್ ಅವರು ಈಗಾಗಲೇ ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಮತ್ತಷ್ಟು ಪ್ರಶಸ್ತಿ ಗಳಿಸುವಂತಾಗಲು ಅಧಿಕಾರಿ ವರ್ಗ ಜೊತೆಯಾಗಿ ದುಡಿಯುವುದಾಗಿ ತಿಳಿಸಿದರು.

ಅಧಿಕಾರಿಗಳ ಮೇಲೆ ನಂಬಿಕೆ ಇಟ್ಟುಕೊಳ್ಳುವ ರಮೇಶ್ ಅವರು ಹೊಣೆಗಾರಿಕೆಯ ಅರಿವನ್ನು ಮೂಡಿಸುತ್ತಿದ್ದರು.

ಮಾತಿನಲ್ಲೇ 'ಹಿಪ್ನೊಟೈಸ್' ಮಾಡುವ ಕಲೆ ಅವರಲ್ಲಿ ಇದ್ದಂತಿದೆ ಎಂದು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ ಹೇಳಿದರು.

ಉಪ ವಿಭಾಗಾಧಿಕಾರಿ ಕುಮಾರಸ್ವಾಮಿ ಮಾತನಾಡಿ, ಬಸವಣ್ಣನವರು ಇವನಾರವ, ಇವನಾರವ ಎನ್ನದೇ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದು ಹೇಳಿದ್ದರು. ಅದರಂತೆ ರಮೇಶ್ ಅವರು ಇವ 'ದಾವಣಗೆರೆಯವ ಎಂದೆನಿಸಯ್ಯ' ಎಂಬಂತೆ ನಮ್ಮಲ್ಲಿ ಒಂದಾಗಿ ಕಾರ್ಯ ನಿರ್ವಹಿಸಿದ್ದರು. ತಾಳ್ಮೆ ಹಾಗೂ ಆಲಿಸುವಿಕೆ ಇದ್ದರೆ ಸೃಜನಶೀಲತೆಯಿಂದ ಮುಂದೆ ಬರಬಹುದು ಎಂಬುದಕ್ಕೆ ಅವರು ಉದಾಹರಣೆ ಎಂದರು.

ನೂತನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ರಮೇಶ್ ಜಿಲ್ಲೆಯಲ್ಲಿ ಲೋಪ - ದೋಷವಿಲ್ಲದೇ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ ಎಂದರು.

ಜಿಲ್ಲೆಯಿಂದ ವರ್ಗವಾಗಿರುವ ರಮೇಶ್ ಅವರಿಗೆ ಇನ್ನೂ ಯಾವ ಕಡೆಯೂ ಜಾಗ ತೋರಿಸಿಲ್ಲ ಎಂದು ಜನರು ಬೇಸರಪಟ್ಟುಕೊಳ್ಳುವುದು ಬೇಡ. ಸರಿಯಾದ ಸಮಯ ಬಂದಾಗ ಅವರಿಗೆ ಸೂಕ್ತ ಸ್ಥಾನ, ಅವಕಾಶಗಳು ಸಿಗಲಿವೆ. ಅಲ್ಲಿಯವರೆಗೆ ಕಾಯಬೇಕಿದೆ ಎಂದರು.





### 'ಗೌತಮ'ನಿಂದ ಬುದ್ಧ ಮೂರ್ತಿಯ ಗೌರವ

ಸದಾ ಹಸನ್ಮುಖಿಯಾಗಿರುವ ಡಿ.ಎಸ್. ರಮೇಶ್ ಅವರನ್ನು ಬೀಳ್ಕೊಡುವಾಗ ಜಿಲ್ಲೆಯ ಅಧಿಕಾರಿ ವೃಂದ ಬುದ್ಧನ ಪ್ರತಿಮೆ ನೀಡಿ ಗೌರವಿಸಿದ್ದು ಸಾಂಕೇತಿಕದಂತಿತ್ತು.

ತಮ್ಮ ಹೆಸರಿನಲ್ಲೇ ಬುದ್ಧನ ಇನ್ನೊಂದು ಹೆಸರಾದ 'ಗೌತಮ' ಹೊಂದಿರುವ ನೂತನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು ಪ್ರತಿಮೆಯನ್ನು ನೀಡಿ ನಿರ್ಗಮಿತ ಜಿಲ್ಲಾಧಿಕಾರಿಗೆ ಪೇಟ ತೊಡಿಸಿ ಸನ್ಮಾನಿಸಿದರು.

### ಸಾರ್ವಜನಿಕರ ಸಹಕಾರವೇ 'ಸೇವಕರಿಗೆ' ಶ್ರೀರಕ್ಷೆ

ನೌಕರರೆಂದರೆ ಸರ್ಕಾರದಿಂದ ನೇಮಕಗೊಂಡ ಸಾರ್ವಜನಿಕರ ಸೇವಕರು ಎಂದಿರುವ ನಿಕಟಪೂರ್ವ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಸಾರ್ವಜನಿಕರ ಸಹಕಾರವೇ ನೌಕರರಿಗೆ ಶ್ರೀರಕ್ಷೆ ಎಂದಿದ್ದಾರೆ.

ಬೀಳ್ಕೊಡುಗೆ ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದ ಅವರು, ನಾವು ಶೇ.100ರಷ್ಟೇನೂ ಸೇವೆ ಮಾಡಿಲ್ಲ. ನಮ್ಮ ವೃತ್ತದೊಳಗೆ ಶೇ.1ರಷ್ಟು ಮಾತ್ರ ಕೆಲಸ ಮಾಡಿದ್ದೇವೆ ಎಂದು ಅವರು ಹೇಳಿದಾಗ, ಮತ್ತಷ್ಟು ಸೇವೆ ಮಾಡಬೇಕೆಂಬ ಹುಮ್ಮಸ್ಸು ಕಾಣುತ್ತಿತ್ತು.

ಸಾರ್ವಜನಿಕರು ಹಾಗೂ ಅಧಿಕಾರಿಗಳ ಮಿಡಿತ ಒಂದೇ ಆದಾಗ ಹೆಚ್ಚು ಕೆಲಸ ಮಾಡಲು ಸಾಧ್ಯ. ಕಳೆದ ಎರಡು ವರ್ಷ ಮೂರು ತಿಂಗಳಲ್ಲಿ ಅಧಿಕಾರಿಗಳು, ಸಾರ್ವಜನಿಕರು, ಜನಪ್ರತಿನಿಧಿಗಳೆಲ್ಲರೂ ನೀಡಿದ ಸಹಕಾರವೇ ತಮಗೆ ಶ್ರೀರಕ್ಷೆಯಾಗಿತ್ತು ಎಂದು ರಮೇಶ್ ಹೇಳಿದರು.

ವೇದಿಕೆಯ ಮೇಲೆ ಡಿ.ಎಸ್. ರಮೇಶ್ ಅವರ ಪತ್ನಿ ಶ್ರೀಮತಿ ಶೋಭಾ ರಮೇಶ್ ಹಾಗೂ ಪುತ್ರಿ ಕು. ಚಿನ್ಮಯಿ ಉಪಸ್ಥಿತರಿದ್ದರು.

ಭಾರತಿ ನೇರಲಕಟ್ಟೆ ಪ್ರಾರ್ಥಿಸಿದರು. ಉಪ ವಿಭಾಗಾಧಿಕಾರಿ ಕುಮಾರಸ್ವಾಮಿ ಸ್ವಾಗತಿಸಿದರು. ನಿಟ್ಟೂರು ಗಂಗಾಧರ್ ನಿರೂಪಿಸಿದರು.

## ಶಬರಿಮಲೈ ಹೋರಾಟ; ಸಚಿವರ ನಿವಾಸಕ್ಕೆ ನುಗ್ಗಲು ಬಿಜೆವೈಎಂ ಯತ್ನ

ತಿರುವನಂತಪುರಂ, ಅ. 11 –ಶಬರಿಮಲೆ ಪ್ರತಿಭಟನೆ ತೀವ್ರಗೊಳ್ಳುತ್ತಿರುವ ನಡುವೆಯೇ, ಕೇರಳ ದೇವಸ್ಥಾನದ ಸಚಿವ ಕಾಡಕಂಪಳ್ಳಿ ಸುರೇಂದ್ರನ್ ನಿವಾಸಕ್ಕೆ ನುಗ್ಗಲು ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ಕಾರ್ಯಕರ್ತರು ಪ್ರಯತ್ನ ನಡೆಸಿದ ಘಟನೆ ನಡೆದಿದೆ. ಪೊಲೀಸರು ಜಲಫಿರಂಗಿ ಹಾಗೂ ಅಶ್ರುವಾಯು ಬಳಸಿ ಅವರನ್ನು ಚೆದುರಿಸಿದ್ದಾರೆ.

ಸ್ವಾಮಿಯೇ ಶರಣಂ ಅಯ್ಯಪ್ಪ ಘೋಷಣೆ ಕೂಗುತ್ತಿದ್ದ ಕಾರ್ಯಕರ್ತರು ಸಚಿವರ ನಿವಾಸಕ್ಕೆ ನುಗ್ಗುವ ಪ್ರಯತ್ನ ನಡೆಸಿದ್ದರು. ಪರಿಸ್ಥಿತಿ ಕೈ ಮೀರಿದಾಗ ಪೊಲೀಸರು ಗುಂಪು ಚೆದುರಿಸಲು ಕ್ರಮ ತೆಗೆದುಕೊಂಡಿದ್ದಾರೆ.

ಶಬರಿಮಲೆ ರಕ್ಷಣಾ ವೇದಿಕೆ ಹಾಗೂ ಆದಿವಾಸ ಸಂರಕ್ಷಣಾ ಸಮಿತಿ ವತಿಯಿಂದ ಹಲವೆಡೆ ಧರಣಿಗಳನ್ನೂ ಸಹ ನಡೆಸಲಾಗಿದೆ. ಈ ನಡುವೆ, ಅಯ್ಯಪ್ಪ ಸ್ವಾಮಿ ಯಾತ್ರೆಗೆ ತೆರಳುವ ಮೂಲ ಶಿಬಿರವಾದ ನಿಲಕ್ಕಲ್‌ನಲ್ಲಿ ನೆರೆದಿದ್ದ ಹಲವಾರು ಯಾತ್ರಿಗಳು ಶಬರಿಮಲೆ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ನೂರ್ನಾಡ್‌ನಿಂದ ಆರಂಭಿಸಲಾಗಿರುವ 'ಶಬರಿಮಲೆ ಉಳಿಸಿ' ಯಾತ್ರೆಯನ್ನು ಉದ್ದೇಶಿಸಿ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಪಿ.ಎಸ್. ಶ್ರೀಧರನ್ ಪಿಳ್ಳೈ, ಸಾರ್ವಜನಿಕರು ಬೃಹತ್ ಪ್ರಮಾಣದಲ್ಲಿ ಅಭಿಯಾನಕ್ಕೆ ಬೆಂಬಲ ನೀಡುತ್ತಿದ್ದಾರೆ ಎಂದಿದ್ದಾರೆ.

ಸ್ವಾಮಿ ಅಯ್ಯಪ್ಪ ಜನಿಸಿದ ನಾಡು ಎಂದೇ ಹೆಸರಾಗಿರುವ ಪಂಡಲಂನಿಂದ ಬುಧವಾರ ಯಾತ್ರೆ ಆರಂಭಿಸಲಾಗಿದೆ. ಅಕ್ಟೋಬರ್ 15ರಂದು ರಾಜ್ಯದ ರಾಜಧಾನಿಯಲ್ಲಿ ಯಾತ್ರೆ ಅಂತ್ಯವಾಗಲಿದೆ.

## ಪೇದೆಯನ್ನು ನಿಂದಿಸಿದ ವಾಹನ ಸವಾರ !

ದಾವಣಗೆರೆ, ಅ.11- ಸಂಚಾರಿ ಪೊಲೀಸರ ಮೇಲೆ ನಿಂದಿಸಿರುವ ಮತ್ತೊಂದು ಪ್ರಕರಣ ನಗರದಲ್ಲಿ ವರದಿಯಾಗಿದೆ.

ಬಾಕಿ ದಂಡದ ಹಣವನ್ನು ಕೇಳಿದ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸ್ ಪೇದೆ ಓರ್ವರನ್ನು ವಾಹನ ಸವಾರನೋರ್ವ ನಿಂದಿಸಿರುವ ಘಟನೆ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿ ಬಳಿ ನಡೆದಿದೆ.

ಉತ್ತರ ಸಂಚಾರ ಪೊಲೀಸ್ ಠಾಣೆಯ ಪೇದೆ ಕುರುವತ್ತಿ ಹನುಮಂತಪ್ಪ ಕೇಸ್ ಇದ್ದ ವಾಹನ ತಪಾಸಣೆ ಮಾಡುತ್ತಿದ್ದರು. ಈ ವೇಳೆ ಬಾಕಿ ಉಳಿಸಿಕೊಂಡಿದ್ದ ದಂಡ ಕೇಳಿದ್ದಕ್ಕೆ ಸೀಮೆಎಣ್ಣೆ ಸೋಮಣ್ಣ ಎಂಬಾತ ಅವಾಚ್ಯ ಶಬ್ದದಿಂದ ನಿಂದಿಸಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಉತ್ತರ ಸಂಚಾರ ಪೊಲೀಸ್ ಠಾಣೆಗೆ ಎಸ್ಪಿ ಆರ್. ಚೇತನ್ ಭೇಟಿ ನೀಡಿ ಘಟನೆಯ ಮಾಹಿತಿ ಕಲೆ ಹಾಕಿದ್ದಾರೆ.

ಉತ್ತರ ಸಂಚಾರ ಪೊಲೀಸ್ ಠಾಣೆಗೆ ಭೇಟಿ ನೀಡಿ ಪೊಲೀಸ್ ಪೇದೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ ಡಿವಿಎಸ್‌ಪಿ ಅವರಿಗೆ ತನಿಖೆ ನಡೆಸುವಂತೆ ಸೂಚಿಸಲಾಗಿದೆ. ತನಿಖಾ ವರದಿ ನಂತರ ಸಮಗ್ರ ಮಾಹಿತಿ ತಿಳಿಯಲಿದೆ ಎಂದು ಎಸ್ಪಿ ಆರ್. ಚೇತನ್ ತಿಳಿಸಿದ್ದಾರೆ.

## ಮಲ್ಯ ಬೆಂಗಳೂರಿನ ಆಸ್ತಿ ವಶಕ್ಕೆ ಕೋರ್ಟ್ ಆದೇಶ



ನವದೆಹಲಿ, ಅ. 11 – ಫೆರಾ ನಿಯಮಗಳ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ಯದ ದೊರೆ ವಿಜಯ್ ಮಲ್ಯಗೆ ಸೇರಿದ ಬೆಂಗಳೂರಿನಲ್ಲಿರುವ ಆಸ್ತಿ ಗಳನ್ನು ಜಪ್ತಿ ಮಾಡಿಕೊಳ್ಳುವಂತೆ ದೆಹಲಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಈ ಹಿಂದಿನ ಜಪ್ತಿ ಆದೇಶ ಪಾಲಿಸಲು ಹೆಚ್ಚಿನ ಸಮಯ ಬೇಕು ಎಂದು ಜಾರಿ ನಿರ್ದೇಶನಾಲಯದ ಮೂಲಕ ಬೆಂಗಳೂರು ಪೊಲೀಸರು ಅರ್ಜಿ ದಾಖಲಿಸಿದ್ದರು. ಆನಂತರ ಮುಖ್ಯ ಮೆಟ್ರೋಪಾ ಲಿಟನ್ ನ್ಯಾಯ ಮೂರ್ತಿ ದೀಪಕ್ ಶೆರಾವತ್ ಅವರು ಹೊಸ ನಿರ್ದೇಶನಗಳನ್ನು ನೀಡಿದ್ದಾರೆ. ಮಲ್ಯಗೆ ಸೇರಿದ 159 ಆಸ್ತಿ ಗಳನ್ನು ಗುರುತಿಸಲಾಗಿದೆ. ಆದರೆ, ಸಮಯದ ಕೊರತೆಯಿಂದಾಗಿ ಜಪ್ತಿ ಮಾಡಿ ಕೊಳ್ಳಲು ಸಾಧ್ಯವಾಗಿಲ್ಲ ಎಂದು ಬೆಂಗಳೂರು ಪೊಲೀಸರು ಇದಕ್ಕೂ ಮುಂಚೆ ನ್ಯಾಯಾಲಯಕ್ಕೆ ತಿಳಿಸಿದ್ದರು.

ನ್ಯಾಯಾಲಯ ಹೊರಡಿಸಿದ ಸಮನ್ಸ್‌ಗೆ ಮಲ್ಯ ಸ್ಪಂದಿಸಿದ ಕಾರಣ, ಆತನನ್ನು ಘೋಷಿತ ಅಪರಾಧಿ ಎಂದು ಪರಿಗಣಿಸಲಾಗಿದೆ. ಮಲ್ಯ ಆಸ್ತಿಯನ್ನು ಜಪ್ತಿ ಮಾಡಿಕೊಳ್ಳಲು ಮೇ ತಿಂಗ ಳಲ್ಲಿ ನ್ಯಾಯಾಲಯ ನಿರ್ದೇಶನ ನೀಡಿತ್ತು. ಮಲ್ಯಗೆ ಸೇರಿದ ಕೆಲ ಆಸ್ತಿಗಳನ್ನು ಈಗಾಗಲೇ ಜಾರಿ ನಿರ್ದೇಶನಾಲಯ ಜಪ್ತಿ ಮಾಡಿಕೊಂಡಿದೆ. ಹೀಗಾಗಿ ಉಳಿದ ಆಸ್ತಿಗಳನ್ನು ಗುರು ತಿಸಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಲಾಗಿದೆ.

## ಡಾ|| ಸಿದ್ದರಾಮಯ್ಯ ಮಂಡ್ಯ ಲೋಕಸಭಾ ಬಿಜೆಪಿ ಅಭ್ಯರ್ಥಿ

ಬೆಂಗಳೂರು, ಅ.11- ವಾಣಿಜ್ಯ ಇಲಾಖೆಯ ನಿವೃತ್ತ ಅಧಿಕಾರಿ ಡಾ|| ಸಿದ್ದರಾಮಯ್ಯ ಮಂಡ್ಯ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಈ ಕ್ಷೇತ್ರದಿಂದ ಕಣಕ್ಕಿಳಿಯಲು ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್, ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಸೇರಿದಂತೆ, ಹಲವು ನಾಯಕರು ಹಿಂದೇಟು ಹಾಕಿದರು.

ನಿವೃತ್ತ ಅಧಿಕಾರಿಯನ್ನು ಇವರೇ ತರಾತುರಿಯಲ್ಲಿ ಕರೆತಂದು ಪಕ್ಷದ ಕಚೇರಿಯಲ್ಲಿ ರಾಜ್ಯಾಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ ಮಾಡಿಸಿ, ಅಭ್ಯರ್ಥಿಯಾಗಿಯೂ ಘೋಷಣೆ ಮಾಡಿಬಿಟ್ಟರು. ಮಂಡ್ಯ ಮತ್ತು ಶ್ರೀರಂಗಪಟ್ಟಣದಿಂದ ಶಾಸಕರಾಗಿ ಆಯ್ಕೆಯಾಗಿದ್ದ ದೊಡ್ಡಬೋರೇಗೌಡರ ಪುತ್ರ. ಡಾ|| ಸಿದ್ದರಾಮಯ್ಯ ರಾಜಕೀಯ ಕುಟುಂಬದಿಂದಲೇ ಬಂದವರು.

ಇವರ ತಂದೆ ಕಾಂಗ್ರೆಸ್, ಜನತಾ ಪಕ್ಷದಿಂದ ಗುರುತಿಸಿಕೊಂಡಿದ್ದರು, ಈಗ ಇವರ ಪುತ್ರ ಕಮಲ ಹಿಡಿದು ರಾಜಕೀಯ ಪ್ರವೇಶಿಸುತ್ತಿದ್ದಾರೆ. ವಿಧಾನಪರಿಷತ್ ಸದಸ್ಯ ಸಿ.ಎಂ. ಲಿಂಗಪ್ಪ ಅವರ ಪುತ್ರ ಚಂದ್ರಶೇಖರ್ ಈಗಾಗಲೇ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರೂ, ರಾಮನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಟಿಕೆಟ್ ಇನ್ನೂ ಖಚಿತವಾಗಿಲ್ಲ.

ಅನಿತಾ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಲು ಜೆಡಿಎಸ್ ತೀರ್ಮಾನಿಸಿದ್ದು, ತನೆ ಹೊತ್ತ ಮಹಿಳೆ ಪಕ್ಷದ ಅಭ್ಯರ್ಥಿಗೆ ಕಠಿಣ ಸವಾಲು ಒಡ್ಡುವ ಅಭ್ಯರ್ಥಿಯ ಹುಡುಕಾಟ ನಡೆದಿದೆ.

## ದುರ್ಗಾ ಪೂಜಾ ಸಮಿತಿಗಳಿಗೆ ಸರ್ಕಾರದ ಹಣ; ಇಂದು ವಿಚಾರಣೆ

ನವದೆಹಲಿ, ಅ. 11 – ದುರ್ಗಾ ಪೂಜೆ ಉತ್ಸವಕ್ಕಾಗಿ ಪಶ್ಚಿಮ ಬಂಗಾಳ ಪ್ರತಿ ಪೂಜಾ ಸಮಿತಿಗೆ 10 ಸಾವಿರ ರೂ.ಗಳನ್ನು ನೀಡಲು ಮುಂದಾಗಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಒಳಪಡಿಸಲಿದೆ. ಮುಖ್ಯ ನ್ಯಾಯ ಮೂರ್ತಿ ರಂಜನ್ ಗೊಗೊಯ್ ಅವರ ನೇತೃತ್ವದ ಪೀಠದ ಎದುರು ಈ ಬಗ್ಗೆ ಅರ್ಜಿ ಸಲ್ಲಿಸಲಾಗಿತ್ತು. ಮಮತಾ ಬ್ಯಾನರ್ಜಿ ಸರ್ಕಾರ ತೆಗೆದುಕೊಂಡ ನಿರ್ಧಾರದಲ್ಲಿ ಮಧ್ಯ ಪ್ರವೇಶಿಸಲು ಹೈಕೋರ್ಟ್ ನಿರಾಕರಿಸಿತ್ತು. ನಂತರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ವಕೀಲ ಸೌರವ್ ದತ್ತ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ರಾಜ್ಯ ಸರ್ಕಾರದ ನಿರ್ಧಾರ ಸ್ಥಾಪಿತ ಕಾನೂನು ತತ್ವಗಳಿಗೆ ವಿರುದ್ಧ ವಾಗಿದೆ. ಈ ಬಗ್ಗೆ ತುರ್ತು ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿಕೊಂಡಿದ್ದರು. ರಾಜ್ಯ ಸರ್ಕಾರ ಒಟ್ಟು 28 ಕೋಟಿ ರೂ. ವಿತರಿಸಲು ಉದ್ದೇಶಿಸಿದೆ. ಸರ್ಕಾರದ ಈ ಕ್ರಮದಲ್ಲಿ ಯಾವುದೇ ಸಾರ್ವಜನಿಕ ಹಿತವಿಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿ ವಿದ್ಯುತ್ ಇಲ್ಲ

ಬಸ್ ಸ್ಟ್ಯಾಂಡ್, ಗೂಡ್ ಶೆಡ್ ರೋಡ್, ಹಲಗೇರಿ ರೋಡ್, ಸ್ಟೇಷನ್ ರೋಡ್, ಕುಂಬಾರ ಓಣಿ, ದೊಡ್ಡಪೇಟೆ ಏರಿಯಾಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.



**ಮಹಿಳಾ ದಂಡು... ದಾಂಡಿಯಾ ರಂಗು...**

ದಾವಣಗೆರೆಯ ದೈವಜ್ಞ ಕಲ್ಯಾಣ ಮಂಟಪದಲ್ಲಿ ಲೇಡಿಸ್ ಕ್ಲಬ್ ವತಿಯಿಂದ ಗುರುವಾರ ಸಂಜೆ ಏರ್ಪಾಡಾಗಿದ್ದ ದಸರಾ ಮಹೋತ್ಸವದ ದಾಂಡಿಯಾ ರಾಸ್ ಕಾರ್ಯಕ್ರಮವನ್ನು ಶಾಸಕ ಎಸ್.ಎ. ರವೀಂದ್ರನಾಥ್ ಅವರು ಸ್ವತಃ ಕೋಲಾಟದಲ್ಲಿ ಪಾಲ್ಗೊಳ್ಳುವುದರೊಂದಿಗೆ ಉದ್ಘಾಟಿಸಿದರು. ರವೀಂದ್ರನಾಥ್ ಅವರಿಗೆ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಸಾಥ್ ನೀಡಿದರು.

## ಪಿಎಲ್‌ಡಿ ಬ್ಯಾಂಕುಗಳಿಗೆ ಸಾಲ ಮನ್ನಾ ಯೋಜನೆ ವಿಸ್ತರಿಸುವಂತೆ ಒತ್ತಾಯ

ದಾವಣಗೆರೆ, ಅ. 11- ರಾಜ್ಯದ ಪಿ.ಎಲ್.ಡಿ. ಬ್ಯಾಂಕುಗಳಿಗೆ ಸಾಲ ಮನ್ನಾ ಯೋಜನೆ ವಿಸ್ತರಿಸುವಂತೆ ದಾವಣಗೆರೆ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಬಿ.ಎಸ್. ರಮೇಶ್ ಅವರು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಒತ್ತಾಯಿಸಿದ್ದಾರೆ.

ಸಾಲ ಮನ್ನಾ ಪ್ರಯೋಜನವು ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಮಾಡಿದ ಬೆಳೆ ಸಾಲಕ್ಕೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡದಿರ ಕೃಷಿ ಸಾಲಕ್ಕೆ ಮಾತ್ರ ಅನ್ವಯವಾಗುವುದೆಂದು ಸರಕಾರ ಆದೇಶ ಹೊರಡಿಸಿರುವುದರಿಂದ. ರಾಜ್ಯದ ಪಿಎಲ್‌ಡಿ ಬ್ಯಾಂಕುಗಳಲ್ಲಿ ಕೃಷಿ ಸಾಲ ಪಡೆದ ರೈತರಿಗೆ ಅನ್ಯಾಯವಾದಂತಾಗಿದೆ ಎಂದು ಹೇಳಿದ್ದಾರೆ.

ಸರ್ಕಾರದ ಆದೇಶದ ಪ್ರಕಾರ ಸಾಲಗಾರ ರೈತರಿಗೆ ಸಾಲ ವಸೂಲಾತಿಗಾಗಿ ಯಾವುದೇ ತರಹದ ನೋಟಿಸ್ ನೀಡಬಾರದೆಂದು ತಿಳಿಸಲಾಗಿದೆ. ಆದರೆ ಪಿ.ಎಲ್.ಡಿ. ಬ್ಯಾಂಕುಗಳು ಶೇ. 70 ರಷ್ಟು ಸಾಲ ವಸೂಲಾತಿ ಸಾಧಿಸದಿದ್ದರೆ ಹೊಸ ಸಾಲ ಹಂಚಿಕೆ ನೀಡಲು ನಬಾರ್ಡ್ ಸಂಸ್ಥೆಯವರು ನಿರಾಕರಿಸುತ್ತಾರೆ. ಇದರಿಂದಾಗಿ ಬ್ಯಾಂಕಿನ ವ್ಯವಹಾರ ನಡೆಸುವುದು ಕಷ್ಟಕರವಾಗಿದೆ. ಅಲ್ಲದೇ ಬ್ಯಾಂಕಿನ ಸಿಬ್ಬಂದಿ ಅವರಿಗೆ ಮಾಸಿಕ ವೇತನ ನೀಡಲೂ ಕಷ್ಟ ಸಾಧ್ಯವಾಗಿದೆ ಎಂದು ಹೇಳಿಕೊಂಡಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಕೃಷಿ ಸಾಲಕ್ಕೆ ಈಗಾಗಲೇ ಘೋಷಿಸಿರುವಂತೆ ದೀರ್ಘಾವಧಿ ಸಾಲ ಪಡೆದ ಪಿ.ಎಲ್.ಡಿ. ಬ್ಯಾಂಕುಗಳ ರೈತರ ಸಂಪೂರ್ಣ ಸಲಾ ಮನ್ನಾ ಅಥವಾ ಸಂಪೂರ್ಣ ಬಡ್ಡಿ ಮನ್ನಾ ಮಾಡಲು ಅಥವಾ ಸಾಲ ವಸೂಲಾತಿಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ.

ಸಾಲ ವಸೂಲಾತಿಯ ನಿರ್ಬಂಧವನ್ನು ಪರಿಗಣಿಸದೇ ಹೊಸ ಸಾಲ ನೀಡುವುದಕ್ಕೆ ಅನುಮತಿ ಕೊಡಿಸಬೇಕು. ಇವುಗಳಲ್ಲಿ ಯಾವುದಾದರೂ ಒಂದು ಪ್ರಯೋಜನಕಾರಿ ಅಂಶವನ್ನು ಪರಿಗಣಿಸದಲ್ಲಿ ರಾಜ್ಯದ 177 ಬ್ಯಾಂಕುಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬಹುದು ಮತ್ತು ಸಿಬ್ಬಂದಿ ಅವರ ಭವಿಷ್ಯವನ್ನು ಸರ್ಕಾರ ಪರಿಗಣಿಸಬಹುದಾಗಿದೆ ಎಂದಿದ್ದಾರೆ.

## ಪದ್ಮ ಪ್ರಶಸ್ತಿಗಾಗಿ 50 ಸಾವಿರ ಜನರ ಹೆಸರು ಶಿಫಾರಸ್ಸು

ನವದೆಹಲಿ, ಅ. 11 - 2019ರ ಸಾಲಿನ ಪದ್ಮ ಪ್ರಶಸ್ತಿಗಳಾಗಿ ಸುಮಾರು 50 ಸಾವಿರ ಜನರ ಹೆಸರುಗಳನ್ನು ಶಿಫಾರಸ್ಸು ಮಾಡಲಾಗಿದೆ. ದಾಖಲೆಯ 49,992 ಹೆಸರುಗಳನ್ನು ಪದ್ಮ ಪ್ರಶಸ್ತಿಗೆ ಶಿಫಾರಸ್ಸು ಮಾಡಲಾಗಿದೆ. 2010ರಲ್ಲಿ ಕೇವಲ 1,313 ಹೆಸರುಗಳು ಮಾತ್ರ ಸಾರ್ವಜನಿಕರಿಂದ ಸಲ್ಲಿಕೆಯಾಗಿದ್ದವು ಎಂದು ಗೃಹ ಇಲಾಖೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ. 2017ರಲ್ಲಿ 35,595 ಹೆಸರುಗಳನ್ನು ಶಿಫಾರಸ್ಸು ಮಾಡಲಾಗಿತ್ತು. 2016ರಲ್ಲಿ ಈ ಸಂಖ್ಯೆ 18768 ಆಗಿತ್ತು.

# ಇಂಜಿನಿಯರಿಂಗ್ ಕಾಲೇಜಿನಲ್ಲಿ 50 ರಷ್ಟು ಮಾತ್ರ ಪ್ರವೇಶ



ಬಿಐಇಟಿಯಲ್ಲಿ ಹ್ಯಾಕಥಾನ್ ಕಾರ್ಯಕ್ರಮ

ದಾವಣಗೆರೆ, ಅ.11- ದೇಶದ, ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇ.50 ರಷ್ಟು ಮಾತ್ರ ಪ್ರವೇಶಾತಿಯಾಗಿದೆ ಎಂದು ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ|| ವೈ. ವೃಷಬೇಂದ್ರಪ್ಪ ಆತಂಕ ವ್ಯಕ್ತಪಡಿಸಿದರು.

ಅವರು ಇಂದು ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಏರ್ಪಡಿಸಿದ್ದ ಹ್ಯಾಕಥಾನ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಇಂಜಿನಿಯರಿಂಗ್ ಕಾಲೇಜುಗಳಲ್ಲಿ 3 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶವಕಾಶವಿದ್ದು, ಕೇವಲ ಒಂದೂವರೆ ಲಕ್ಷ ವಿದ್ಯಾರ್ಥಿಗಳು ಮಾತ್ರ ಇಂಜಿನಿಯರಿಂಗ್ ಕಾಲೇಜುಗಳನ್ನು ಸೇರುತ್ತಿದ್ದಾರೆ. ಬೆಂಗಳೂರಿನಲ್ಲಿ ಬಹುತೇಕ ಇಂಜಿನಿಯರಿಂಗ್ ಕಾಲೇಜುಗಳನ್ನು ಮುಚ್ಚಲಾಗುತ್ತಿದೆ ಎಂದು ತಿಳಿಸಿದರು.

ಅನೇಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದಿರುವುದು ಹಾಗೂ ಪ್ರಾಥಮಿಕದಿಂದ ಪಿಯುಸಿವರೆಗೆ ಸಮರ್ಪ ಕವಾಗಿ ವಿಜ್ಞಾನದ ಬಗ್ಗೆ ಶಿಕ್ಷಣ ನೀಡದಿರುವುದು ಕಾರಣವಾಗಿದೆ ಎಂದು ಹೇಳಿದರು.

ಇಂದು ವಿಜ್ಞಾನ-ತಂತ್ರಜ್ಞಾನಗಳ ನಾಗಾಲೋಟ ದಲ್ಲಿ ಓಡುತ್ತಿವೆ. ಈ ವೇಗಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಹೋಗಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತಂತ್ರಜ್ಞಾನದಲ್ಲಿ ಹೆಚ್ಚಿನ ಜ್ಞಾನ ಪಡೆಯಲು ವಿದ್ಯಾರ್ಥಿಗಳು ಗುಂಪು-ಗುಂಪಾಗಿ ಗುಪ್ತ ಸಂಕೇತ ನೀಡುವ ಹ್ಯಾಕಥಾನ್ ಕಾರ್ಯಕ್ರಮ ಆಯೋಜಿಸಿ ರುವುದು ಅರ್ಥಪೂರ್ಣವಾಗಿದೆ ಎಂದರು.

ಕಲಿಯುವಿಕೆಗೆ ಕಾಲದ ಮಿತಿಯಿಲ್ಲ. ಓದುವ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಪಠ್ಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಇಂದು ತಂತ್ರಜ್ಞಾನ ಮಹತ್ತರ ಪಾತ್ರ ವಹಿಸುತ್ತಿದೆ. ಪುರಿ ಜಗನ್ನಾಥ ದೇವರ ರಥೋತ್ಸವ, ಕುಂಭ ಮೇಳ ಮುಂತಾದ ಬೃಹತ್ ಕಾರ್ಯಕ್ರಮ ಗಳಲ್ಲಿ ಆಗುವ ಅನಾಹುತ ಅಹಿತಕರ ಘಟನೆಗಳನ್ನು ತಡೆಗಟ್ಟಲು ತಂತ್ರಜ್ಞಾನ ಸಹಾಯಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹೆಸರು ಮಾಡಿದ ವಿಜ್ಞಾನಿಯೊಬ್ಬರು ಹಣದ ಆಮಿಷಕ್ಕೆ ಬಲಿಯಾಗಿ ತಾನು ಗಳಿಸಿದ್ದ ತಂತ್ರಜ್ಞಾನ ವನ್ನು ಮಾರಿಕೊಂಡಿರುವುದು ತಲೆತಗ್ಗಿಸುವ ವಿಷಯವಾಗಿದೆ ಎಂದು ವಿಷಾದಿಸಿದರು.

ವಿದ್ಯಾರ್ಥಿಗಳು ತಮ್ಮ ಊರು, ಕಾಲೇಜು, ರಾಜ್ಯ, ದೇಶ ಶ್ರೇಷ್ಠ ಎಂಬ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು. ದೇಶ ಉಳಿದರೆ ನಾವೂ ಉಳಿಯುತ್ತೇವೆ ಎಂದು ಮಾರ್ಮಿಕವಾಗಿ ನುಡಿದರು.

ಮುಖ್ಯ ಅತಿಥಿಗಳಾಗಿ ಹೈದರಾಬಾದ್‌ನ ಐಬಿಎಂ ಅಭಿವೃದ್ಧಿ ವಿಭಾಗದ ವಕೀಲರಾದ ಸಿ. ಯುಕ್ತೇಶ್, ಸ್ಮಾರ್ಟ್ ಬ್ರಿಡ್ಜ್ ನಿರ್ದೇಶಕ ಅಮರೇಂದರ್ ಕಾಟ್ಯಾಮ್, ಬಿಐಇಟಿ ಪ್ರಭಾರ ಪ್ರಾಂಶುಪಾಲ ಪ್ರೊ. ಕೆ.ಎಸ್. ಬಸವರಾಜಪ್ಪ, ಜೈವಿಕ ತಂತ್ರಜ್ಞಾನ ಮುಖ್ಯಸ್ಥ ಡಾ|| ಬಿ.ಇ. ರಂಗಸ್ವಾಮಿ ಮತ್ತಿತರರು ಆಗಮಿಸಿದ್ದರು.

ಅಧ್ಯಕ್ಷತೆಯನ್ನು ಪಿಎಸ್ ಮತ್ತು ಇ ವಿಭಾಗದ ಮುಖ್ಯಸ್ಥರಾದ ಡಾ|| ಸಿ.ಆರ್. ನಿರ್ಮಲಾ ವಹಿಸಿದ್ದರು. ಶೀತಲ್ ಪ್ರಾರ್ಥಿಸಿದರು. ವಿಜಯ ಸ್ವಾಗತಿಸಿದರು. ಮಲ್ಲಿಕಾರ್ಜುನ್ ವಂದಿಸಿದರು.

|| ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ ||
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಬೆಂಗಳೂರು ಸಿಟಿ ವಾಸಿ
ಶ್ರೀ ಡಿ. ಹಾಲಪ್ಪ, Retd. Supdt. Engr., K.E.B.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 02.10.2018ನೇ ಮಂಗಳವಾರ ಬೆಳಿಗ್ಗೆ 8.20ಕ್ಕೆ
ನನ್ನ ಧರ್ಮಪತ್ನಿಯವರಾದ
ಶ್ರೀಮತಿ ಡಿ.ಎಂ. ಲಲಿತಮ್ಮನವರು
ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆಯನ್ನು"
ದಿನಾಂಕ : 14.10.2018ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ
ಬೆಂಗಳೂರಿನ ಸ್ವಗೃಹ ನಂ. 683, ಶ್ರೀ ಶೈಲ ನಿಲಯ, 1ನೇ ಕ್ರಾಸ್, 2ನೇ "ಎ" ಮೇನ್, 2ನೇ ಹಂತ, 11ನೇ ಬ್ಲಾಕ್, ಅಲಹಾಬಾದ್ ಬ್ಯಾಂಕ್ ಹಿಂಭಾಗ, ಪಾಪರೆಡ್ಡಿ ಪಾಳ್ಯ, ನಾಗರಬಾವಿ, ಬೆಂಗಳೂರು-560 072 ಇಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಡಿ.ಹೆಚ್. ಕಲಾ, ಶ್ರೀ ಎಸ್. ವಿಜಯಕುಮಾರ್, ದಾವಣಗೆರೆ.
ಶ್ರೀಮತಿ ಡಿ.ಹೆಚ್. ಸುಜಾತ, ಶ್ರೀ ಡಿ.ಎಂ. ಓಂಕಾರಪ್ಪ, ಬೆಂಗಳೂರು.
ಶ್ರೀ ಡಿ.ಹೆಚ್. ಆನಂದ್, ಶ್ರೀಮತಿ ಎನ್.ಕೆ. ಶೈಲಜಾ, ಬೆಂಗಳೂರು.
ಶ್ರೀ ಡಿ.ಹೆಚ್. ವಿನೋದ್, ಶ್ರೀಮತಿ ಆರ್.ಎಸ್. ಪ್ರೀತಿ, ಬೆಂಗಳೂರು., ಮೊಮ್ಮಕ್ಕಳು, ಮರಿ ಮಕ್ಕಳು ಹಾಗೂ ಅಪಾರ ಬಂಧುಗಳು-ಮಿತ್ರರು, ಮೊ. : 95913 80993, 99860 52742, 99804 20981
ವಿ.ಸೂ. : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು ತಲುಪದೇ ಇರುವವರು ಇದನ್ನೇ ಆತ್ಮೀಯ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

JANATHAVANI - RNI No: 27369/75, KA/SK/CTA-275/2018-2020. Published and owned by M.S.Vikas, Printed by M.S. Vikas, at Jayadhara Offset Printers, # 326, Dixit Road, Kasturba Extension, Davangere - 2, Published from #326, Dixit Road, Kasturba Extension, Davangere - 2. Editor M.S.Vikas.